# ರಾಷ್ಟ್ರೀಯ ಹಸಿರು ಪಡೆ ಕರ್ನಾಟಕ

# ವಾರ್ಷಿಕ ವರದಿ 2021-22




EMPRI
Environmental Management & Policy Research Institute

ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ)

(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಸ್ವಾಯತ್ತ ಸಂಸ್ಥೆ, ಕರ್ನಾಟಕ ಸರ್ಕಾರ)

# ರಾಷ್ಟ್ರೀಯ ಹಸಿರು ಪಡೆ ಕರ್ನಾಟಕ

## ವಾರ್ಷಿಕ ವರದಿ 2021–22

**ಸಲ್ಲಿಕೆ: ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ**
**ಭಾರತ ಸರ್ಕಾರ**


**ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ)**
(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಸ್ವಾಯತ್ತ ಸಂಸ್ಥೆ, ಕರ್ನಾಟಕ ಸರ್ಕಾರ)
“ಹಸಿರು ಭವನ”, ದೊರೆಸಾನಿಪಾಳ್ಯ ಅರಣ್ಯ ಪ್ರದೇಶ, ವಿನಾಯಕನಗರ ವೃತ್ತ,
5 ನೇ ಹಂತ, ಜೆ.ಪಿ. ನಗರ, ಬೆಂಗಳೂರು 560 078

ದೂರವಾಣಿ: 080–2649 0746/47, ಫ್ಯಾಕ್ಸ್: 080–2649 0745

ವೆಬ್‌ಸೈಟ್: https://empri.karnataka.gov.in
https://ngc.karnataka.gov.in
ಇಮೇಲ್: ngc-empri@karnataka.gov.in
empri.ngc@gmail.com

# "ರಾಷ್ಟ್ರೀಯ ಹಸಿರು ಪಡೆ" (ರಾ ಹ ಪ)

2001ರಲ್ಲಿ ಆರಂಭಗೊಂಡ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮವು ಭಾರತ ಸರ್ಕಾರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ (MoEF&CC) ರಾಷ್ಟ್ರೀಯ ಶಾಲಾ ಕಾರ್ಯಕ್ರಮವಾಗಿದೆ. ಪರಿಸರದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಪರಿಸರದ ರಕ್ಷಣೆ ಮತ್ತು ಸುಧಾರಣೆಗೆ ಕ್ರಿಯಾಧಾರಿತ ಕಾರ್ಯಕ್ರಮಗಳನ್ನು ಕೈಗೊಳ್ಳಲು ರಾಷ್ಟ್ರಾದ್ಯಂತ ಶಾಲೆಗಳಲ್ಲಿ ಇಕೋ–ಕ್ಲಬ್‌ಗಳನ್ನು ಸ್ಥಾಪಿಸುವ ಮೂಲಕ "ರಾಷ್ಟ್ರೀಯ ಹಸಿರು ಸೈನ್ಯ" ವನ್ನು ಸ್ಥಾಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ(ಪನಿನೀಸಂಸಂ) ಯು 2009ರ ಜನವರಿಯಿಂದ ರಾಷ್ಟ್ರೀಯ ಹಸಿರು ಪಡೆಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕರ್ನಾಟಕದ ನೋಡಲ್ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಭಾರತ ಸರ್ಕಾರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ (MoEF&CC) ಮಾರ್ಗಸೂಚಿಯ ಪ್ರಕಾರ, ಕರ್ನಾಟಕ ರಾಜ್ಯದ 34 ಶೈಕ್ಷಣಿಕ ಜಿಲ್ಲೆಗಳಲ್ಲಿ 16850 ಶಾಲೆಗಳಲ್ಲಿ ಇಕೋ–ಕ್ಲಬ್‌ಗಳು ಸ್ಥಾಪನೆಯಾಗಿದ್ದು, 2021–22ನೇ ಸಾಲಿನಲ್ಲಿ, 10200 ಇಕೋ–ಕ್ಲಬ್ ಶಾಲೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಇಕೋ–ಕ್ಲಬ್‌ಗಳ ವಿವರಗಳು ಈ ಕೆಳಗಿನಂತಿವೆ: –

**2021–22 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿನ ಇಕೋ–ಕ್ಲಬ್ ಶಾಲೆಗಳ ಸಂಖ್ಯೆ**

| ಕ್ರ. ಸಂ | ಶಾಲೆಯ ವರ್ಗ | ಇಕೋ–ಕ್ಲಬ್ ಶಾಲೆಗಳ ಸಂಖ್ಯೆ |
|---|---|---|
| 1 | ಸರ್ಕಾರಿ ಶಾಲೆಗಳು | 8666 |
| 3 | ಸರ್ಕಾರಿ ಅನುದಾನಿತ ಶಾಲೆಗಳು | 1503 |
| 5 | ಖಾಸಗಿ (ಅನುದಾನಿತ ರಹಿತ) ಶಾಲೆಗಳು | 31 |
| **ಒಟ್ಟು** | | **10200** |

## 2021–22ರ ಅವಧಿಯ ರಾ.ಹ.ಪ ಕಾರ್ಯಕ್ರಮಗಳು

ಕರ್ನಾಟಕ ರಾಜ್ಯದ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದ ಚಟುವಟಿಕೆಗಳನ್ನು ಬೆಂಬಲಿಸಲು, ಭಾರತ ಸರ್ಕಾರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯ (ಇಇ–ವಿಭಾಗ) ವು ಪರಿಸರ ಶಿಕ್ಷಣ ಜಾಗೃತಿ ಮತ್ತು ತರಬೇತಿ (EEAT) ಯೋಜನೆಯಡಿ ರೂ. 6,51,70,506/– (ರೂ. ಆರು ಕೋಟಿ ಐವತ್ತೊಂದು ಲಕ್ಷದ ಎಪ್ಪತ್ತು ಸಾವಿರದ ಐನೂರ ಆರು) ಅನುದಾನವನ್ನು ಅನುಮೋದಿಸಿ ರೂ 5,99,85,506/– (ರೂ. ಐದು ಕೋಟಿ ತೊಂಬತ್ತೊಂಬತ್ತು ಲಕ್ಷದ ಎಂಬತ್ತೈದು ಸಾವಿರದ ಐನೂರ ಆರು) ಅನುದಾನವನ್ನು ಎಂಪ್ರಿ ಸಂಸ್ಥೆಗೆ ಮಂಜುರಾತಿ ಆದೇಶ ಸಂಖ್ಯೆ: No.3-1/2020-EE, ಕ್ರಮವಾಗಿ ದಿನಾಂಕ 20ನೇ ಜುಲೈ 2021 ಮತ್ತು 26ನೇ ಜುಲೈ 2021 ಗಳ ಮೂಲಕ ಬಿಡುಗಡೆಗೊಳಿಸಿದೆ.

ಬಿಡುಗಡೆಗೊಂಡ ರೂ. 5,99,85,506/– ಅನುದಾನದಲ್ಲಿ ರೂ. 2,04,00,000/– ಅನುದಾನವನ್ನು ಪ್ರತಿ ಇಕೋ–ಕ್ಲಬ್‌ಗೆ ರೂ. 5.000/– ದಂತೆ 34 ಶೈಕ್ಷಣಿಕ ಜಿಲ್ಲೆಗಳ 4080 ಇಕೋ–ಕ್ಲಬ್ ಶಾಲೆಗಳಿಗೆ ಸಾಮಾನ್ಯ ಬಜೆಟ್ ಹೆಡ್‌ನಡಿಯಲ್ಲಿ ಬೆಂಬಲಿಸಲು ಮತ್ತು ರೂ. 3,06,00,000/– ಅನುದಾನವನ್ನು ಪ್ರತಿ ಇಕೋ–ಕ್ಲಬ್‌ಗೆ ರೂ. 5.000/– ದಂತೆ 34 ಶೈಕ್ಷಣಿಕ ಜಿಲ್ಲೆಗಳ ಪರಿಶಿಷ್ಟ ಜಾತಿ ವರ್ಗಕ್ಕೆ ಸೇರಿದ 6120 ಇಕೋ–ಕ್ಲಬ್‌ಗಳಿಗೆ ಪರಿಶಿಷ್ಟ ಜಾತಿ ಬಜೆಟ್ ಹೆಡ್‌ನಡಿಯಲ್ಲಿ ಬೆಂಬಲಿಸಲು ಒಟ್ಟಾರೆಯಾಗಿ ಪ್ರತಿಜಿಲ್ಲೆಯಲ್ಲೂ 300 ಶಾಲೆಗಳಂತೆ ರೂ. 5,10,00,000/– (ಐದು ಕೋಟಿ ಹತ್ತು ಲಕ್ಷ ಮಾತ್ರ) ಅನುದಾನವನ್ನು 34 ಜಿಲ್ಲೆಗಳ 10,200 ಇಕೋ–ಕ್ಲಬ್ ಶಾಲೆಗಳಿಗೆ ಬಿಡುಗಡೆಗೊಳಿಸಲಾಗಿದೆ.

ಜಿಲ್ಲಾ ಮಟ್ಟದಲ್ಲಿ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದ ಅನುಷ್ಠಾನ ಮತ್ತು ಮೇಲ್ವಿಚಾರಣೆಯನ್ನು ಬಲಪಡಿಸಲು ರೂ. 25,000/–ದಂತೆ 34 ಶೈಕ್ಷಣಿಕ ಜಿಲ್ಲೆಗಳಿಗೆ ರೂ. 8,50,000/– (ಎಂಟು ಲಕ್ಷದ ಐವತ್ತು ಸಾವಿರ ಮಾತ್ರ) ಅನುದಾನ ಹಾಗೂ 2020–21ನೇ ಸಾಲಿನ ಆಡಳಿತಾತ್ಮಕ ಶುಲ್ಕ (ಇಕೋ–ಕ್ಲಬ್ ಶಾಲೆಗಳಿಗೆ ಮತ್ತು ಜಿಲ್ಲಾ ಹಂತದ ಮೇಲ್ವಿಚಾರಣೆಗೆ ಒಟ್ಟು ಬಿಡುಗಡೆಗೊಳಿಸಿದ ಅನುದಾನದ 10%) ರೂ. 81,35,506/– (ಎಂಭತ್ತೊಂದು ಲಕ್ಷದ ಮೂವತ್ತೈದು ಸಾವಿರದ ಐನೂರ ಆರು ಮಾತ್ರ)ಗಳನ್ನು ಮರುಪಾವತಿಯಾಗಿ ಬಿಡುಗಡೆಗೊಳಿಸಿದೆ. 2021–22ನೇ ಸಾಲಿಗೆ ಮಂಜೂರಾಗಿರುವ ಆಡಳಿತಾತ್ಮಕ ವೆಚ್ಚವು ರೂ. 51,85,000/– ವಾಗಿದ್ದು, ಆಡಳಿತಾತ್ಮಕ ವೆಚ್ಚವನ್ನು ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು 2022–23ನೇ ಸಾಲಿನಲ್ಲಿ ಮರುಪಾವತಿ ಮಾಡುತ್ತದೆ.

**2021–22ನೇ ಸಾಲಿನಲ್ಲಿ ಮಂಜೂರಾದ ಮತ್ತು ಬಿಡುಗಡೆಯಾದ ಅನುದಾನಗಳ ವಿಭಜನೆ**

| ಕ್ರ.ಸಂ | ವಿವರಗಳು | ಮಂಜೂರಾತಿ ಮೊತ್ತ (ರೂ.) | ಬಿಡುಗಡೆ ಮೊತ್ತ (ರೂ.) |
|---|---|---|---|
| ಎ | ಪ್ರತಿ ಇಕೋ–ಕ್ಲಬ್‌ಗೆ ರೂ. 5,000/– ಅನುದಾನದಂತೆ, 34 ಜಿಲ್ಲೆಗಳ 4080 ಇಕೋಕ್ಲಬ್‌ಗಳಿಗೆ ಸಾಮಾನ್ಯ ಬಜೆಟ್ ಹೆಡ್‌ನಡಿಯಲ್ಲಿ ಆರ್ಥಿಕ ನೆರವು | 2,04,00,000/– | 2,04,00,000/– |
| ಬಿ | ಪ್ರತಿ ಇಕೋ–ಕ್ಲಬ್‌ಗೆ ರೂ. 5.000/– ಅನುದಾನದಂತೆ, 34 ಜಿಲ್ಲೆಗಳ ಪರಿಶಿಷ್ಟ ಜಾತಿ ವರ್ಗಕ್ಕೆ ಸೇರಿದ 6120 ಇಕೋ–ಕ್ಲಬ್‌ಗಳಿಗೆ ಆರ್ಥಿಕ ನೆರವು | 3,06,00,000/– | 3,06,00,000/– |
| ಸಿ | ಪ್ರತಿ ಜಿಲ್ಲೆಗೆ ರೂ. 25000/– ದಂತೆ 34 ಜಿಲ್ಲೆಗಳಿಗೆ ಜಿಲ್ಲಾ ಮಟ್ಟದಲ್ಲಿ ಅನುಷ್ಠಾನ ಮತ್ತು ಮೇಲ್ವಿಚಾರಣೆಯನ್ನು ಬಲಪಡಿಸಲು ಆರ್ಥಿಕ ನೆರವು | 8,50,000/– | 8,50,000/– |
| ಡಿ | 2021–22ನೇ ಸಾಲಿನ ಆಡಳಿತಾತ್ಮಕ ಶುಲ್ಕ:<br>(ಇಕೋ–ಕ್ಲಬ್‌ಗಳಿಗೆ ಮತ್ತು ಜಿಲ್ಲಾ ಮಟ್ಟದ ಮೇಲ್ವಿಚಾರಣೆಗೆ ಬಿಡುಗಡೆಗೊಳಿಸಿದ ಅನುದಾನದ 10%) | 51,85,000/– | |
| ಇ | 2020–21ನೇ ಸಾಲಿನ ಆಡಳಿತಾತ್ಮಕ ಶುಲ್ಕಗಳ ಮರುಪಾವತಿ | 81,35,506/– | 81,35,506/– |
| **ಒಟ್ಟು ಅನುದಾನ** | | **6,51,70,506/–** | **5,99,85,506/–** |

<u>**34 ಶೈಕ್ಷಣಿಕ ಜಿಲ್ಲೆಗಳ ಇಕೋ–ಕ್ಲಬ್‌ಗಳು ಮತ್ತು ಸಮಗ್ರ ಶಿಕ್ಷಣ, ಕರ್ನಾಟಕ (SSK) ಗಳ ಅನುದಾನ ವರ್ಗಾವಣೆಯ ವಿವರಗಳು**</u>

ಪ್ರತಿ ಇಕೋ–ಕ್ಲಬ್‌ಗೆ ರೂ. 5,000/–ದಂತೆ ಸಾಮಾನ್ಯ ವರ್ಗಕ್ಕೆ ಸೇರಿದ 4080 ಇಕೋ–ಕ್ಲಬ್ ಶಾಲೆಗಳಿಗೆ ರೂ. 2,04,00,000/– ಅನುದಾನವನ್ನು ಮತ್ತು ಪ್ರತಿ ಇಕೋ–ಕ್ಲಬ್‌ಗೆ 5,000/–ದಂತೆ ಪರಿಶಿಷ್ಟ ಜಾತಿ ವರ್ಗಕ್ಕೆ ಸೇರಿದ 6120 ಇಕೋ–ಕ್ಲಬ್ ಶಾಲೆಗಳಿಗೆ ರೂ. 3,06,00,000/– ಅನುದಾನವನ್ನು ಎಂಪ್ರಿಯು ವರ್ಗಾವಣೆ ಮಾಡಿದೆ. ಪ್ರತಿ ಶೈಕ್ಷಣಿಕ ಜಿಲ್ಲೆಗಳಿಗೆ 300 ಇಕೋ–ಕ್ಲಬ್‌ಗಳ ಹಾಗೆ ಒಟ್ಟು ಆರ್ಥಿಕ ನೆರವು ರೂ. 5,10,00,000/– ಅನ್ನು 10,200 ಇಕೋ–ಕ್ಲಬ್ ಶಾಲೆಗಳಿಗೆ ವರ್ಗಾಯಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಅನುಷ್ಠಾನ ಮತ್ತು ಮೇಲ್ವಿಚಾರಣೆಯನ್ನು ಬಲಪಡಿಸಲು ಪ್ರತಿ ಜಿಲ್ಲೆಗೆ ರೂ. 25,000/–ದಂತೆ ರೂ. 8,25,000/–ಗಳ ಅನುದಾನವನ್ನು 33 ಶೈಕ್ಷಣಿಕ ಜಿಲ್ಲೆಗಳಿಗೆ ಎಂಪ್ರಿಯು ವರ್ಗಾಯಿಸಿದೆ. (ಬಳ್ಳಾರಿ ಜಿಲ್ಲೆಯನ್ನು ಹೊರತುಪಡಿಸಿ, ಬಳ್ಳಾರಿ ಜಿಲ್ಲೆಯ ನೋಡಲ್ ಅಧಿಕಾರಿ 2020–21 ರ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ).

## 2021-22 ರ ರಾಷ್ಟ್ರೀಯ ಹಸಿರು ಪಡೆಯ ಅಡಿಯಲ್ಲಿ ಚಟುವಟಿಕೆಗಳು/ಕಾರ್ಯಕ್ರಮಗಳು

| ಕ್ರ.ಸಂ | ಅಭಿಯಾನ/ಕಾರ್ಯಕ್ರಮದ ಹೆಸರು | ಕಾರ್ಯಕ್ರಮದ ದಿನಾಂಕ | ಸ್ಥಳ | ಭಾಗಗಳು | ಭಾಗವಹಿಸಿದವರ ಸಂಖ್ಯೆ | ಸಾರಾಂಶ |
|---|---|---|---|---|---|---|
| 01 | ವಿಶ್ವ ಭೂ ದಿನ | 22-04-2021 | ಆನ್‌ಲೈನ್ (ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ) | ಇಕೋ-ಕ್ಲಬ್ ಉಸ್ತುವಾರಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು | 365 | ಸಂಪನ್ಮೂಲ ವ್ಯಕ್ತಿಗಳಾದ, ಶ್ರೀಮತಿ ನಳಿನಿ ಶೇಖರ್, ಸಾಮಾಜಿಕ ಕಾರ್ಯಕರ್ತೆ ಮತ್ತು "ಹಸಿರು ದಳ" ಸಹ-ಸಂಸ್ಥಾಪಕರು, ಬೆಂಗಳೂರು ಇವರು ಘನತ್ಯಾಜ್ಯ ನಿರ್ವಹಣೆ ಮತ್ತು ತ್ಯಾಜ್ಯ ಆಯುವವರ ಕುರಿತು ಉಪನ್ಯಾಸ ನೀಡಿದರು. ಶ್ರೀ ವಾಸುಕಿ ಅಯ್ಯಂಗಾರ್, ಸಾಯಿಲ್ ಮತ್ತು ಹೆಲ್ತ್ ಸಲ್ಯೂಷನ್ಸ್, ಬೆಂಗಳೂರು ಇವರು ಹಸಿ ತ್ಯಾಜ್ಯ ಮತ್ತು ಒಣ ತ್ಯಾಜ್ಯ ನಿರ್ವಹಣೆ ಮತ್ತು ಮಿಶ್ರಗೊಬ್ಬರ (ಕಾಂಪೋಸ್ಟಿಂಗ್) ಕುರಿತು ಉಪನ್ಯಾಸ ನೀಡಿದರು. |
| 02 | ವಿಶ್ವ ಪರಿಸರ ದಿನಾಚರಣೆ | 05-06-2021 | ಆನ್‌ಲೈನ್ | ಎಂಪ್ರಿ ಸಿಬ್ಬಂದಿ ಮತ್ತು ಸಾರ್ವಜನಿಕರು | 100+ | "ವಿಶ್ವ ಪರಿಸರ ದಿನದ ಪ್ರಾಮುಖ್ಯತೆ" ಕುರಿತು ವೆಬ್‌ನಾರ್ ಅನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಈ ಕೆಳಗಿನ ಸಂಪನ್ಮೂಲ ವ್ಯಕ್ತಿಗಳು ಮಾತನಾಡಿದರು.<br>• ಶ್ರೀ ಅಜಯ್ ಮಿಶ್ರಾ ಐಎಫ್‌ಎಸ್, ಪಿಸಿಸಿಎಫ್(ವನ್ಯಜೀವಿ) (ನಿವೃತ್ತ) ರವರಿಂದ ಮುಖ್ಯ ಭಾಷಣ<br>• ಡಾ. ಕೆ.ಎಚ್. ವಿನಯ ಕುಮಾರ್ ಐಎಫ್‌ಎಸ್(ನಿವೃತ್ತ) ನಿರ್ದೇಶಕರು (ಸಂಶೋಧನೆ) ಎಂಪ್ರಿ ರವರಿಂದ "ಪರಿಸರ ವ್ಯವಸ್ಥೆಯ ಮಹತ್ವ"ದ ಬಗ್ಗೆ ಭಾಷಣ<br>• ಶ್ರೀ ಮಹೇಶ್ ಟಿ ತಾಂತ್ರಿಕ ನಿರ್ದೇಶಕರು ಎಂಪ್ರಿ ರವರಿಂದ "ವಿಶ್ವ ಪರಿಸರ ದಿನದ ಪ್ರಾಮುಖ್ಯತೆ"ಯ ಬಗ್ಗೆ ಭಾಷಣ<br>• ಡಾ. ಎಂ ಕೆ ರಮೇಶ್, ಪ್ರೊ. ಎನ್‌ಎಲ್‌ಎಸ್‌ಐಯು ಇವರು "ಪರಿಸರ ವ್ಯವಸ್ಥೆಯ ಪುನಃಸ್ಥಾಪನೆ"ಯ ಬಗ್ಗೆ ಮಾತನಾಡಿದರು. |
| 03 | ಏಕ್ ಭಾರತ್ ಶ್ರೇಷ್ಠ ಭಾರತ್ ಕಾರ್ಯಕ್ರಮ | 06-07-2021 | ಆನ್‌ಲೈನ್ | ನೋಡಲ್ ಅಧಿಕಾರಿಗಳು, ಇಕೋ-ಕ್ಲಬ್ ಉಸ್ತುವಾರಿ ಶಿಕ್ಷಕರು, ಕರ್ನಾಟಕ ಮತ್ತು ಉತ್ತರಾಖಂಡದ ವಿದ್ಯಾರ್ಥಿಗಳು | 450 | "ಕರ್ನಾಟಕ ಮತ್ತು ಉತ್ತರಾಖಂಡ ರಾಜ್ಯಗಳ ಅಪರೂಪದ ಜೀವವೈವಿಧ್ಯ ಅಂಶಗಳು ಮತ್ತು ಪಾರಂಪರಿಕ ತಾಣಗಳು" ಕುರಿತಾದ ವೆಬಿನಾರ್ ಅನ್ನು ಉತ್ತರಾಖಂಡ ರಾಜ್ಯದ ಸಹಯೋಗದಲ್ಲಿ ಆಯೋಜಿಸಲಾಗಿತ್ತು. ಡಾ.ಎ.ಕೆ.ಚಕ್ರವರ್ತಿ, ಸಂಶೋಧನಾ ವಿಜ್ಞಾನಿ, ಎಂಪ್ರಿ ಹಾಗೂ ಶ್ರೀ.ಡಿ.ಪಿ.ಪುರೋಹಿತ್ ರಾಜ್ಯ ಸಂಯೋಜಕರು ಸಮಗ್ರ ಶಿಕ್ಷಣ, ಉತ್ತರಾಖಂಡ ಇವರು ವೆಬ್‌ನಾರ್ ವಿಷಯಗಳ |

| | | | | | | |
|---|---|---|---|---|---|---|
| | | | | | | ಕುರಿತು ವಿವರಿಸಿದರು. |
| 04 | ರಾ.ಹ.ಪ ಜಾಲತಾಣದಲ್ಲಿ ಬನ್ನೇರುಘಟ್ಟ ಜೈವಿಕ ಉದ್ಯಾನವನದ ಮಾಹಿತಿ | ಆಗಸ್ಟ್ 2021 ರಿಂದ ಇಲ್ಲಿಯವರೆಗೆ | ಆನ್‌ಲೈನ್ | ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು | - | ಸಾರ್ವಜನಿಕರಿಗೆ ಮಾಹಿತಿಗಳನ್ನು ಬಿತ್ತರಿಸಲು, ರಾ.ಹ.ಪ ಜಾಲತಾಣದಲ್ಲಿ ಬನ್ನೇರುಘಟ್ಟ ಜೈವಿಕ ಉದ್ಯಾನವನದ ಚಿಟ್ಟೆ ಉದ್ಯಾನವನದ ಮಾಹಿತಿಗಳನ್ನು ಪ್ರದರ್ಶಿಸಲಾಗಿದೆ. |
| 05 | "ಸಂರಕ್ಷಣಾ ಶಿಕ್ಷಣ" ಕುರಿತು ತರಬೇತಿ | 03–08–2021 ರಿಂದ 04–08–2021 | ಆನ್‌ಲೈನ್ | ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು | 100+ | ಸೆಂಟ್ರಲ್ ಅಕಾಡೆಮಿ ಫಾರ್ ಸ್ಟೇಟ್ ಫಾರೆಸ್ಟ್ ಸರ್ವೀಸ್, ಡೆಹ್ರಾಡೂನ್ ಆಯೋಜಿಸಿದ ತರಬೇತಿಯಲ್ಲಿ ಶಾಲಾ ಹಂತದಲ್ಲಿ ಆಯೋಜಿಸಬಹುದಾದ ಪರಿಸರ ಸಂರಕ್ಷಣೆಯ ವಿವಿಧ ವಿಧಾನಗಳನ್ನು ಚರ್ಚಿಸಲಾಯಿತು. |
| 06 | ಡಬ್ಲ್ಯೂಡಬ್ಲ್ಯೂಎಫ್ ಇಂಡಿಯಾದ "ಒಂದು ಭೂಮಿ ಒಂದು ಮನೆ" ಕಾರ್ಯಕ್ರಮ | 09–08–2021 | ಆನ್‌ಲೈನ್ | ನೋಡಲ್ ಅಧಿಕಾರಿಗಳು, ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು | 450+ | ಡಬ್ಲ್ಯೂಡಬ್ಲ್ಯೂಎಫ್ ಇಂಡಿಯಾದಿಂದ "ಒಂದು ಭೂಮಿ ಒಂದು ಮನೆ ಕಾರ್ಯಕ್ರಮ"ವನ್ನು ಆಯ್ದ ಇಕೋ ಕ್ಲಬ್ ಶಾಲೆಗಳಲ್ಲಿ ಪ್ರಾರಂಭಿಸಲಾಯಿತು. ಪರಿಸರದ ಬಗ್ಗೆ ಪರವಾದ ಮನೋಭಾವ ಮತ್ತು ನಡವಳಿಕೆಯನ್ನು ವಿದ್ಯಾರ್ಥಿಗಳಲ್ಲಿ ತುಂಬುವ ಪ್ರಾಮುಖ್ಯತೆಯನ್ನು ಕಾರ್ಯಕ್ರಮದಲ್ಲಿ ಕೇಂದ್ರೀಕರಿಸಲಾಯಿತು. |
| 07 | ಅರಿಶಿನ ಗಣೇಶ ಅಭಿಯಾನ | 30–08–2021 | ಆನ್‌ಲೈನ್ /ರಾ.ಹ.ಪ ಜಾಲತಾಣ ಮತ್ತು ಇಕೋ–ಕ್ಲಬ್ ಶಾಲೆಗಳು | ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು | - | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ವತಿಯ ಅರಿಶಿನ ಗಣೇಶ ಅಭಿಯಾನವನ್ನು ರಾ.ಹ.ಪ ಜಾಲತಾಣದ ಮೂಲಕ ಪ್ರಚಾರ ಮಾಡಲಾಯಿತು. ಹಲವು ಇಕೋ ಕ್ಲಬ್ ಶಾಲೆಗಳು ಪರಿಸರ ಸ್ನೇಹಿ ಗಣೇಶ ಹಬ್ಬವನ್ನು ಆಚರಿಸಿ ಅರಿಶಿನ ಗಣೇಶ ಅಭಿಯಾನವನ್ನು ಪ್ರಚಾರಗೊಳಿಸಿದರು. |
| 08 | "ನೀಲಿ ಆಕಾಶಕ್ಕಾಗಿ ಶುದ್ಧ ಗಾಳಿ" ಅಂತರರಾಷ್ಟ್ರೀಯ ದಿನ | 07–09–2021 | ಆನ್‌ಲೈನ್ | ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು, ಸರ್ಕಾರಿ ಅಧಿಕಾರಿಗಳು ಮತ್ತು ಸಾರ್ವಜನಿಕರು | 100+ | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಆಯೋಜಿಸಿದ ವೆಬ್‌ನಾರ್‌ನಲ್ಲಿ ಶುದ್ಧ ಗಾಳಿಯ ಪ್ರಾಮುಖ್ಯತೆ ಮತ್ತು ಗಾಳಿಯ ಗುಣಮಟ್ಟವನ್ನು ಉತ್ತಮಗೊಳಿಸುವ ಪ್ರಯತ್ನದ ಕುರಿತು ಚರ್ಚಿಸಲಾಯಿತು. |
| 09 | ವಿಶ್ವ ಓಝೋನ್ ದಿನ ಆಚರಣೆ | 16–09–2021 | ಎಂಪ್ರಿ ಜೆ. ಪಿ. ನಗರ | ಇಕೋ–ಕ್ಲಬ್ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಎಂಪ್ರಿ ಸಿಬ್ಬಂದಿ | 250+ | • ಓಝೋನ್ ದಿನವನ್ನು ಎನ್ವಿಸ್ ವಿಭಾಗದ ಸಹಯೋಗದೊಂದಿಗೆ ಶಾಲಾ ಮಕ್ಕಳಿಗೆ ರಸಪ್ರಶ್ನೆ, ಚಿತ್ರಕಲೆ ಮತ್ತು ಪಿಕ್ ಮತ್ತು ಸ್ಪೀಕ್ ಸ್ಪರ್ಧೆಗಳನ್ನು ಆಯೋಜಿಸುವ ಮೂಲಕ ಆಚರಿಸಲಾಯಿತು. 1. ಸರ್ಕಾರಿ ಪ್ರೌಢಶಾಲೆ, ಸಾರಕ್ಕಿ, ಬೆಂಗಳೂರು, 2. ಸರ್ಕಾರಿ ಪ್ರೌಢಶಾಲೆ, ಪುಟ್ಟೇನಹಳ್ಳಿ, ಬೆಂಗಳೂರು ಮತ್ತು 3. ಇಂದಿರಾ ಪ್ರಿಯದರ್ಶಿನಿ ಪ್ರೌಢಶಾಲೆ, ಜೆಪಿ ನಗರ, ಬೆಂಗಳೂರು ಈ ಶಾಲೆಗಳ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಡಾ. ಕೆ. ಹೆಚ್ ವಿನಯ ಕುಮಾರ್, ಐಎಫ್‌ಎಸ್ (ನಿವೃತ್ತ), ನಿರ್ದೇಶಕರು (ಸಂಶೋಧನಾ), ಶ್ರೀ. ಟಿ.ಬಾಲಚಂದ್ರ, ಐಎಫ್‌ಎಸ್ (ನಿವೃತ್ತ), ಜೆಎಸ್‌ಡಬ್ಲ್ಯೂ ಯೋಜನಾ ಸಂಯೋಜಕರು, ಶ್ರೀ. ಸಂತೋಷ್ ಸುತಾರ್ ಕೆಎಸ್‌ಪಿಸಿಬಿಯ |

| | | | | | | |
|---|---|---|---|---|---|---|
| | | | | | | ಮಾಧ್ಯಮ ಸಲಹೆಗಾರ ಮತ್ತು ಡಾ.ಎ.ಕೆ.ಚಕ್ರವರ್ತಿ, ವಿಜ್ಞಾನಿ, ಸೆಂಟರ್ ಫಾರ್ ಲೇಕ್, ಎಂಪ್ರಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಓಝೋನ್ ಪದರದ ಮಹತ್ವದ ಕುರಿತು ಮಾಹಿತಿ ನೀಡಿದರು<br>• ಓಝೋನ್ ದಿನದ ಸ್ಮರಣಾರ್ಥ ಓಝೋನ್ ಕೋಶದ ಸಹಯೋಗದಲ್ಲಿ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ನ್ಯಾಷನಲ್ ಮ್ಯೂಸಿಯಂ ಆಫ್ ನ್ಯಾಚುರಲ್ ಹಿಸ್ಟರಿ ಆಯೋಜಿಸಿದ ರಾಷ್ಟ್ರೀಯ ಮಟ್ಟದ ಪೋಸ್ಟರ್ ತಯಾರಿಕೆ ಸ್ಪರ್ಧೆಯಲ್ಲಿ ಸಾನಿಯಾಬಾನು ಕಿವುಡಮ್ಮನವರ, ಕನವಳ್ಳಿ ಸರ್ಕಾರಿ ಉರ್ದು ಪ್ರೌಢಶಾಲೆ, ಹಾವೇರಿ ಜಿಲ್ಲೆ ರವರು ತೃತೀಯ ಬಹುಮಾನವನ್ನು ಪಡೆದರು. |
| 10 | ರಾಮನಗರ ಜಿಲ್ಲೆಯ ಇಕೋ ಕ್ಲಬ್ ಉಸ್ತುವಾರಿ ಶಿಕ್ಷಕರಿಗೆ ತರಬೇತಿ | 25–11–2021 | ಆನ್‌ಲೈನ್ | ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು | 100+ | ಶ್ರೀ ಹರೀಶ್, ಪ್ರೋಗ್ರಾಮ್ ಅಸೋಸಿಯೇಟ್, ಎನ್‌ಜಿಸಿ ಸಂಪನ್ಮೂಲ ವ್ಯಕ್ತಿಯಾಗಿ ತರಬೇತಿಯಲ್ಲಿ ಭಾಗವಹಿಸಿ ಶಾಲಾ ಹಂತದಲ್ಲಿ ಆಯೋಜಿಸಬೇಕಾದ ಎನ್‌ಜಿಸಿ ಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. |
| 11 | ರಾಷ್ಟ್ರೀಯ ಹೆಣ್ಣು ಮಗು ದಿನ | 24–01–2022 | ಆನ್‌ಲೈನ್ | ಸಾರ್ವಜನಿಕರು | 300+ | "ಮಗಳೊಂದಿಗೆ ಸೆಲ್ಫಿ" ಆನ್‌ಲೈನ್ ಪ್ರಚಾರವನ್ನು ಆಯೋಜಿಸಲಾಗಿತ್ತು. ಆಯ್ಕೆಯಾದ ಸೆಲ್ಫಿಗಳನ್ನು ಎನ್‌ಜಿಸಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಲಾಗಿದೆ. |
| 12 | ವಿಶ್ವ ಜೌಗು ಭೂಮಿ ದಿನದ ಆಚರಣೆ | 02–02–2022 | ಆನ್‌ಲೈನ್ | ಸಾರ್ವಜನಿಕರು & ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು | 500+ | ಡಬ್ಲ್ಯುಡಬ್ಲ್ಯುಎಫ್ ಇಂಡಿಯಾ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಸಹಯೋಗದೊಂದಿಗೆ "ಜೌಗು ಭೂಮಿಗಳ ಮರುಸ್ಥಾಪನೆಗಾಗಿ ನದಿ–ಜೌಗು ಭೂಮಿ ಸಂಪರ್ಕ" ಎಂಬ ವಿಷಯದ ಕುರಿತು ವೆಬಿನಾರ್ ಅನ್ನು ಆಯೋಜಿಸಲಾಗಿತ್ತು. |
| 13 | ಅರಣ್ಯ, ವನ್ಯಜೀವಿ ಮತ್ತು ಪರಿಸರ ಸಂರಕ್ಷಣೆ ಕುರಿತು ಸಾಮಾನ್ಯ ಅರಿವು ಮೂಡಿಸುವ ತರಬೇತಿ | 07–02–2022 ರಿಂದ 08–02–2022 | ಆನ್‌ಲೈನ್ | ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು | 492 | ಕೇಂದ್ರೀಯ ಅಕಾಡೆಮಿ ಫಾರ್ ಸ್ಟೇಟ್ ಫಾರೆಸ್ಟ್ ಸರ್ವೀಸ್, ಕೊಯಮತ್ತೂರು ಆಯೋಜಿಸಿದ ತರಬೇತಿಯಲ್ಲಿ ಕಾಡು, ಸಸ್ಯ ಮತ್ತು ಪ್ರಾಣಿಗಳ ಪ್ರಪಂಚ, ಪಕ್ಷಿಗಳ ಜೀವವೈವಿಧ್ಯತೆ, ಗಿಡಗಳನ್ನು ನೆಡುವುದು ಮುಂತಾದ ವಿಷಯಗಳ ಕುರಿತು ಚರ್ಚಿಸಲಾಯಿತು. |
| 14 | ಇಕೋ ಕ್ಲಬ್ ಶಾಲೆಗಳಲ್ಲಿ ಹಾಗೂ ಜಿಲ್ಲೆಗಳಲ್ಲಿ ರಾ.ಹ.ಪ ವೆಬ್ ಅಪ್ಲಿಕೇಶನ್‌ನ ಬಳಕೆ | 2021– 22 ನೆ ಸಾಲಿನಿಂದ | ಆನ್‌ಲೈನ್ | ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು ಮತ್ತು ಜಿಲ್ಲಾ ನೋಡಲ್ ಅಧಿಕಾರಿಗಳು | ಎಲ್ಲಾ ಇಕೋ ಕ್ಲಬ್‌ಗಳು ಮತ್ತು ಜಿಲ್ಲಾ ನೋಡಲ್ ಅಧಿಕಾರಿಗಳು | ಇಕೋ ಕ್ಲಬ್ ಶಾಲೆಗಳಲ್ಲಿ ಹಾಗೂ ಜಿಲ್ಲೆಗಳಲ್ಲಿ ರಾ.ಹ.ಪ ವೆಬ್ ಅಪ್ಲಿಕೇಶನ್ ಅನ್ನು ಬಳಸಲಾಗುತ್ತಿದ್ದು. ಬಳಕೆ ಪ್ರಮಾಣಪತ್ರ, ವರದಿಗಳು ಹಾಗೂ ರಾ.ಹ.ಪ ಕಾರ್ಯಕ್ರಮಕ್ಕೆ ಸಂಬಂಧಿಸಿದ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗುವುದು |
| 15 | ರಾ.ಹ.ಪ ಕೈಪಿಡಿ ಹಾಗೂ ಮಕ್ಕಳ ಚಂದದ ಪರಿಸರ ಪುಸ್ತಕಗಳ ಮುದ್ರಣ | ಫೆಬ್ರವರಿ 2022 | – | ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು ಮತ್ತು ಜಿಲ್ಲಾ ನೋಡಲ್ ಅಧಿಕಾರಿಗಳು | ಎಲ್ಲಾ ಇಕೋ ಕ್ಲಬ್‌ಗಳು ಮತ್ತು ಜಿಲ್ಲಾ | ರಾ.ಹ.ಪ ಕೈಪಿಡಿಯು ರಾ.ಹ.ಪ ಕಾರ್ಯಕ್ರಮದ ಮಾಹಿತಿಯುಳ್ಳ ಉಪಯುಕ್ತ ಪುಸ್ತಕವಾಗಿದ್ದು, ಮಕ್ಕಳ ಚಂದದ ಪರಿಸರ ಪುಸ್ತಕವು ಖ್ಯಾತ ಪರಿಸರವಾದಿ ಶ್ರೀ ನಾಗೇಶ ಹೆಗಡೆಯವರು ಬರೆದ ಪರಿಸರದ |

| | | | | | | |
|---|---|---|---|---|---|---|
| | | | | | ನೋಡಲ್ ಅಧಿಕಾರಿಗಳು | ಕುರಿತಾದ ಮಕ್ಕಳ ಪುಸ್ತಕವಾಗಿದೆ. ಕರ್ನಾಟಕ ರಾಜ್ಯದ ಎಲ್ಲಾ ಇಕೋಕ್ಲಬ್ ಶಾಲೆಗಳಿಗೆ ಕಳುಹಿಸಲು ಪ್ರತಿ ಪುಸ್ತಕಗಳ 17,000 ಪ್ರತಿಗಳನ್ನು ಮುದ್ರಿಸಲಾಗಿದೆ |
| **ಆಜಾದಿ ಕಾ ಅಮೃತ್ ಮಹೋತ್ಸವದ ಚಟುವಟಿಕೆಗಳು** | | | | | | |
| **ಕ್ರ.ಸಂ** | **ಅಭಿಯಾನ/ಕಾರ್ಯಕ್ರಮ ದ ಹೆಸರು** | **ಕಾರ್ಯಕ್ರಮದ ದಿನಾಂಕ** | **ಸ್ಥಳ** | **ಭಾಗಗಳು** | **ಭಾಗವಹಿಸಿದ ವರ ಸಂಖ್ಯೆ** | **ಸಾರಾಂಶ** |
| 01 | ಭಾರತ್ ಕಾ ಅಮೃತ್ ಮಹೋತ್ಸವ – 75 ಹಸಿರು ಒಳ್ಳೆಯ ಕಾರ್ಯ ಚಟುವಟಿಕೆಗಳು | 01–04–2021 ರಿಂದ 31–03–2022 | ಇಕೋ ಕ್ಲಬ್ ಶಾಲೆಗಳು ಮತ್ತು ಆನ್‌ಲೈನ್ ಕಾರ್ಯಕ್ರಮಗಳು | ಶಾಲಾ ವಿದ್ಯಾರ್ಥಿಗಳು, ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು ಮತ್ತು ಸಾರ್ವಜನಿಕರು | ಎಲ್ಲಾ ಇಕೋ ಕ್ಲಬ್ ಶಾಲೆಗಳು | ಭಾರತ ಸರ್ಕಾರವು ಆಗಸ್ಟ್ 15, 2022 ರಂದು ಸ್ವಾತಂತ್ರ್ಯದ 75 ನೇ ವರ್ಷವನ್ನು ಆಚರಿಸಲಿದ್ದು, 75 ವಾರಗಳ ಭಾರತ್ ಕಾ ಅಮೃತ್ ಮಹೋತ್ಸವವನ್ನು ಆಯೋಜಿಸುವ ಮೂಲಕ ಈ ಸಂದರ್ಭವನ್ನು ಸ್ಮರಿಸಲು ಯೋಜಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ 2021ರ ಮಾರ್ಚ್ ಮೊದಲ ವಾರದಿಂದ 75 ವಾರಗಳ ದೀರ್ಘಾವಧಿಯ ಕಾರ್ಯಕ್ರಮವನ್ನು ಕೈಗೊಳ್ಳಲು ಇಕೋ ಕ್ಲಬ್‌ಗಳನ್ನು ನಿಯೋಜಿಸಲಾಗಿದೆ. "ವಾರದ ಹಸಿರು ಒಳ್ಳೆಯ ಕಾರ್ಯ" ಎಂದು ಹಸಿರು ಒಳ್ಳೆಯ ಕಾರ್ಯವನ್ನು ಪ್ರತಿ ವಾರವು ಆಯೋಜಿಸಲಾಗುತಿದೆ. ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ ಕಳುಹಿಸಿರುವ 75 ಹಸಿರು ಒಳ್ಳೆಯ ಕಾರ್ಯಗಳ ಪಟ್ಟಿಯನ್ನು ಕನ್ನಡ ಭಾಷೆಗೆ ಭಾಷಾಂತರಿಸಲಾಗಿದೆ ಮತ್ತು ಜಿಲ್ಲೆಗಳು ಹಾಗೂ ಇಕೋ ಕ್ಲಬ್ ಶಾಲೆಗಳಿಗೆ ಕಳುಹಿಸಲಾಗಿದೆ. ಇಕೋ ಕ್ಲಬ್‌ಗಳು ಹಲವಾರು ಹಸಿರು ಉತ್ತಮ ಕಾರ್ಯ ಚಟುವಟಿಕೆಗಳನ್ನು ಆಯೋಜಿಸಿವೆ. |
| 02 | ಘನ ತ್ಯಾಜ್ಯ ನಿರ್ವಹಣೆ ನಿಯಮಗಳ ಕುರಿತು ವೆಬಿನಾರ್ | 09–04–2021 | ಆನ್‌ಲೈನ್ | ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು | 140 | ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಕುಮಾರ ಸ್ವಾಮಿ, ಮಾಜಿ ಸದಸ್ಯ ಕಾರ್ಯದರ್ಶಿ ಕೆಎಸ್‌ಪಿಸಿಬಿ, ಇವರು ಘನ ತ್ಯಾಜ್ಯ ನಿರ್ವಹಣೆ ನಿಯಮಗಳು ಮತ್ತು ಸರಿಯಾದ ತ್ಯಾಜ್ಯ ನಿರ್ವಹಣೆಯಿಂದ ಪರಿಸರಕ್ಕೆ ಆಗುವ ಪ್ರಯೋಜನಗಳ ಕುರಿತು ಉಪನ್ಯಾಸ ನೀಡಿದರು. |
| 03 | ಮಳೆ ನೀರಿನ ಕೊಯ್ಲು ಕುರಿತು ವೆಬಿನಾರ್ | 15–04–2021 | ಆನ್‌ಲೈನ್ | ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು | 300 | ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಶಿವಕುಮಾರ್, ವಿಜ್ಞಾನಿ, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಷತ್ತು ಇವರು ಮಳೆ ನೀರಿನ ಕೊಯ್ಲು ವಿಧಾನಗಳು, ಅದರ ಅನುಕೂಲಗಳು ಮತ್ತು ಮಳೆ ನೀರು ಕೊಯ್ಲು ವಿಧಾನಗಳನ್ನು ಕಲಿಯಲು ಅನುಕೂಲವಾಗುವ ಮೊಬೈಲ್ ಅಪ್ಲಿಕೇಶನ್‌ನ ಬಗ್ಗೆ ವಿವರಿಸಿದರು. |
| 04 | ಪರಿಸರ ವ್ಯವಸ್ಥೆಯ ಪುನಃಸ್ಥಾಪನೆಯ ಕುರಿತು ವೆಬಿನಾರ್ | 11–06–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, | 149 | ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಡಿ.ಆರ್. ಕುಮಾರಸ್ವಾಮಿ, ಸಿಇಒ (ನಿವೃತ್ತ), ಕೆಎಸ್‌ಪಿಸಿಬಿ ಅವರು ಪರಿಸರ ವ್ಯವಸ್ಥೆಯ ಪುನಃಸ್ಥಾಪನೆಯ ವಿವಿಧ ವಿಧಾನಗಳನ್ನು ವಿವರಿಸಿದರು. |

| | | | | | | |
|---|---|---|---|---|---|---|
| | | | | ಎನ್‌ಜಿಓಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | | |
| 05 | ಸುಸ್ಥಿರ ಅಭಿವೃದ್ಧಿಯ ಮೂಲಕ ನಮ್ಮ ಮಕ್ಕಳಿಗೆ ಅರ್ಹವಾದುದನ್ನು ಸಂರಕ್ಷಿಸುವ ಕುರಿತು ವೆಬಿನಾರ್ | 15–06–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಓಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 114 | ಸಂಪನ್ಮೂಲ ವ್ಯಕ್ತಿಯಾಗಿ ಡಾ. ಎಂ ಲೋಕೇಶ್ವರಿ, ಸಹಾಯಕ ಪ್ರಾಧ್ಯಾಪಕರು ಮತ್ತು ಎನ್‌ಎಸ್‌ಎಸ್ ಅಧಿಕಾರಿ, ಆರ್‌ವಿ ಎಂಜಿನಿಯರಿಂಗ್ ಕಾಲೇಜು, ಬೆಂಗಳೂರು ಇವರು ಸುಸ್ಥಿರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯ ಮಹತ್ವದ ಕುರಿತು ಮಾತನಾಡಿದರು. |
| 06 | ನವೀಕರಿಸಬಹುದಾದ ಮತ್ತು ನವೀಕರಿಸಲಾಗದ ಇಂಧನ ಮೂಲಗಳು ಮತ್ತು ಪರಿಸರ ನಿರ್ವಹಣೆ ಕುರಿತು ವೆಬಿನಾರ್ | 17–06–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಓಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 73 | ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ರಮೇಶ್ ಕುಮಾರ್ ಬಿ.ಎನ್, ಮುಖ್ಯ ಪರಿಸರ ಅಧಿಕಾರಿ (ನಿವೃತ್ತ), ಕೆಎಸ್‌ಪಿಸಿಬಿ, ಮತ್ತು ಪ್ರಕೃತಿ ಪರಿಸರ ಅಧ್ಯಯನ ಸಂಸ್ಥೆಯ ಅಧ್ಯಕ್ಷರು ನಮ್ಮ ಪರಿಸರವನ್ನು ರಕ್ಷಿಸಲು ನವೀಕರಿಸಬಹುದಾದ ಮತ್ತು ನವೀಕರಿಸಲಾಗದ ಇಂಧನ ಮೂಲಗಳ ಮಹತ್ವದ ಕುರಿತು ಚರ್ಚಿಸಿದರು. |
| 07 | ಭೂಮಿಯನ್ನು ಉಳಿಸಲು ಮ್ಯಾಂಗ್ರೋವ್‌ಗಳ ಕುರಿತು ವೆಬಿನಾರ್ | 18–06–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಓಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 30 | ಸಂಪನ್ಮೂಲ ವ್ಯಕ್ತಿಯಾಗಿ ವಿ.ಎನ್. ನಾಯಕ್, ಸಾಗರ ಜೀವಶಾಸ್ತ್ರದ ಪ್ರಾಧ್ಯಾಪಕರು (ನಿವೃತ್ತ) ಇವರು ಮ್ಯಾಂಗ್ರೋವ್‌ಗಳು ಮತ್ತು ಕರಾವಳಿ ಪರಿಸರ ವ್ಯವಸ್ಥೆಯಲ್ಲಿ ಇದರ ಮಹತ್ವದ ಕುರಿತು ವಿವರಿಸಿದರು. |
| 08 | ಕೋವಿಡ್–19 ಸಾಂಕ್ರಾಮಿಕ ಪರಿಸ್ಥಿತಿಯಲ್ಲಿ ಮಾನಸಿಕ ಆರೋಗ್ಯದ ಕುರಿತು ವೆಬಿನಾರ್ | 19–06–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಓಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 58 | ಸಂಪನ್ಮೂಲ ವ್ಯಕ್ತಿಯಾಗಿ ಡಾ.ರವೀಶ್. ಬಿ.ಎನ್ ಮೈಸೂರು ವೈದ್ಯಕೀಯ ಕಾಲೇಜಿನ ಮನೋವೈದ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಇವರು ಕೋವಿಡ್–19 ಸಾಂಕ್ರಾಮಿಕ ಪರಿಸ್ಥಿತಿಯಲ್ಲಿ ಮಾನಸಿಕ ಆರೋಗ್ಯದ ಕುರಿತು ಮಾತನಾಡಿದರು. |
| 09 | ಭಾರತೀಯ ಸಂವಿಧಾನ ಮತ್ತು ಪರಿಸರ ಸಂರಕ್ಷಣೆ ಕುರಿತು | 24–06–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು | 18 | ಸಂಪನ್ಮೂಲ ವ್ಯಕ್ತಿಯಾಗಿ ಡಾ.ಎಂ.ಕೆ. ರಮೇಶ್, ಪ್ರೊಫೆಸರ್ ಎನ್‌ಎಲ್‌ಎಸ್‌ಐಯು, ಇವರು ಭಾರತೀಯ ಸಂವಿಧಾನ, ಪರಿಸರ |

| | | | | | | |
|---|---|---|---|---|---|---|
| | ವೆಬಿನಾರ್ | | | ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಒಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | | ಸಂರಕ್ಷಣೆ ಮತ್ತು ನೈಸರ್ಗಿಕ ಪರಿಸರವನ್ನು ರಕ್ಷಿಸಲು ಹಾಗೂ ಸುಧಾರಿಸಲು ಭಾರತದ ಪ್ರತಿಯೊಬ್ಬ ನಾಗರಿಕನ ಕರ್ತವ್ಯದ ಕುರಿತು ಮಾತನಾಡಿದರು. |
| 10 | ಶಬ್ದಮಾಲಿನ್ಯ ಮತ್ತು ಪ್ರಾಣಿಗಳ ಮೇಲೆ ಅದರ ಪರಿಣಾಮಗಳು ಹಾಗೂ ಅದನ್ನು ಹೇಗೆ ಅಳೆಯಲಾಗುತ್ತದೆ ಎಂಬುವುದರ ಕುರಿತು ವೆಬಿನಾರ್ | 25–06–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಒಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 15 | ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ರಾಧೇಶ್ಯಾಮ್ ಬಾಲಾಜಿ, ಹೆಚ್ಚುವರಿ ನಿರ್ದೇಶಕ (ನಿವೃತ್ತ), ಸಿಪಿಸಿಬಿ ಇವರು ಶಬ್ದ ಮಾಲಿನ್ಯ ಮತ್ತು ಪ್ರಾಣಿಗಳ ಮೇಲೆ ಅದರ ಪರಿಣಾಮಗಳ ಕುರಿತು ಮಾತನಾಡಿದರು. |
| 11 | ಪರಿಸರಕ್ಕೆ ಹಾನಿಕರವಾದ ಸಂಪ್ರದಾಯಗಳ ಕಾನೂನು ಸಬಲೀಕರಣದ ಕುರಿತು ವೆಬಿನಾರ್ | 26–06–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಒಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 28 | ಸಂಪನ್ಮೂಲ ವ್ಯಕ್ತಿಯಾಗಿ ಡಾ. ಎಂ.ಕೆ. ರಮೇಶ್, ಪ್ರೊಫೆಸರ್ ಎನ್‌ಎಲ್‌ಎಸ್‌ಐಯು, ಇವರು ಪರಿಸರಕ್ಕೆ ಹಾನಿಕರವಾದ ಸಂಪ್ರದಾಯಗಳ ಕಾನೂನು ಸಬಲೀಕರಣದ ಬಗ್ಗೆ ವಿವರಿಸಿದರು. |
| 12 | ಜಾಗತಿಕ ಅಂಶ ಮತ್ತು ಸ್ಥಳೀಯ ಕ್ರಿಯೆಗಳ ಕುರಿತು ವೆಬಿನಾರ್ | 28–06–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಒಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 248 | ಸಂಪನ್ಮೂಲ ವ್ಯಕ್ತಿಯಾಗಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಜರ್ನಲಿಸಂ ಅಂಡ್ ನ್ಯೂ ಮೀಡಿಯಾ (IIJNM)ನಲ್ಲಿ ಖ್ಯಾತ ಪರಿಸರವಾದಿ ಮತ್ತು ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ.ನಾಗೇಶ್ ಹೆಗಡೆ ಇವರು ಜಾಗತಿಕ ಅಂಶ ಮತ್ತು ಅದರ ಬಳಕೆಗಳನ್ನು ನಿಯಂತ್ರಿಸುವ ನಿಯಮಗಳ ಬಗ್ಗೆ ವಿವರಿಸಿದರು. |
| 13 | ಪರಿಸರದ ಪರಿಹಾರ – ಮಾಲಿನ್ಯ ನಿಯಂತ್ರಣಕ್ಕಾಗಿ ಸಾಧನ ಕುರಿತು ವೆಬಿನಾರ್ | 29–06–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಒಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 428 | ಸಂಪನ್ಮೂಲ ವ್ಯಕ್ತಿಯಾಗಿ ಡಾ.ಡಿ.ಆರ್.ರವಿ, ಎಸ್‌ಇಒ, ಕೆಎಸ್‌ಪಿಸಿಬಿ, ಬೆಂಗಳೂರು ಇವರು ಪರಿಸರದ ಪರಿಹಾರ – ಪರಿಸರ ಸಂರಕ್ಷಣೆ ಕುರಿತು ಪ್ರಸ್ತುತಿ ಮಂಡಿಸಿದರು. |

| | | | | | | |
|---|---|---|---|---|---|---|
| 14 | ಗ್ರಾಮೀಣ ನೈರ್ಮಲ್ಯ ಕುರಿತು ವೆಬಿನಾರ್ | 01–07–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಒಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 48 | ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಡಿ.ಆರ್. ಕುಮಾರಸ್ವಾಮಿ, ಸಿಇಒ (ನಿವೃತ್ತ), ಕೆಎಸ್‌ಪಿಸಿಬಿ ಇವರು ಗ್ರಾಮೀಣ ನೈರ್ಮಲ್ಯ, ಮಾನವನ ಆರೋಗ್ಯ ಮತ್ತು ಪರಿಸರವನ್ನು ರಕ್ಷಿಸುವಲ್ಲಿ ಇದರ ಮಹತ್ವದ ಕುರಿತು ವಿವರಿಸಿದರು. |
| 15 | ಸಾಂಕ್ರಾಮಿಕ ರೋಗದ ಸಮಯದಲ್ಲಿ ಒತ್ತಡ ಮತ್ತು ಸ್ಥಿತಿಸ್ಥಾಪಕತ್ವದ ಕುರಿತು ವೆಬಿನಾರ್ | 03–07–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಒಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 18 | ಸಂಪನ್ಮೂಲ ವ್ಯಕ್ತಿಯಾಗಿ ಡಾ. ಶಿವಾನಂದ ಮನೋಹರ್ ರವರು ಕೊರೊನಾ ವೈರಸ್ ಸಾಂಕ್ರಾಮಿಕ ಸಮಯದಲ್ಲಿ ಒತ್ತಡದ ಸ್ಥಿತಿ ಸ್ಥಾಪಕತ್ವದ ಬಗ್ಗೆ ವಿವರಿಸಿದರು. |
| 16 | ಜೀವವೈವಿಧ್ಯತೆಯ ನಾಶ ಮತ್ತು ಪರಿಸರ ವ್ಯವಸ್ಥೆಯ ಮೇಲೆ ಅದರ ಪ್ರಭಾವದ ಕುರಿತು ವೆಬಿನಾರ್ | 05–07–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಒಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 31 | ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಡಿ.ಆರ್. ಕುಮಾರಸ್ವಾಮಿ, ಸಿಇಒ (ನಿವೃತ್ತ), ಕೆಎಸ್‌ಪಿಸಿಬಿ ಇವರು ಜೈವಿಕ ವೈವಿಧ್ಯತೆಯ ನಷ್ಟವು ಪರಿಸರ ವ್ಯವಸ್ಥೆಗಳ ಕಾರ್ಯನಿರ್ವಹಣೆಯನ್ನು ಹೇಗೆ ಅಡ್ಡಿ ಪಡಿಸುತ್ತದೆ ಎಂಬುದನ್ನು ವಿವರಿಸಿದರು. |
| 17 | ಕರಾವಳಿ ಮತ್ತು ಸಾಗರದ ಜೈವಿಕ ವೈವಿಧ್ಯತೆಯ ಕುರಿತು ವೆಬಿನಾರ್ | 06–07–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಒಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 255 | ಸಂಪನ್ಮೂಲ ವ್ಯಕ್ತಿಯಾಗಿ ವಿ.ಎನ್. ನಾಯಕ್, ಸಾಗರ ಜೀವಶಾಸ್ತ್ರದ ಪ್ರಾಧ್ಯಾಪಕರು (ನಿವೃತ್ತ) ಇವರು ಕರಾವಳಿ ಮತ್ತು ಸಾಗರದ ಜೈವಿಕ ವೈವಿಧ್ಯತೆಯ ಮಹತ್ವದ ಕುರಿತು ವಿವರಿಸಿದರು. |
| 18 | ಅಪಾಯಕಾರಿ ತ್ಯಾಜ್ಯ ನಿರ್ವಹಣೆ – ನಿಯಮಗಳು ಮತ್ತು ನಿಬಂಧನೆಗಳ ಕುರಿತು ವೆಬಿನಾರ್ | 09–07–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಒಗಳು, ಶಿಕ್ಷಣ ಸಂಸ್ಥೆಗಳು ಮತ್ತು | 31 | ಸಂಪನ್ಮೂಲ ವ್ಯಕ್ತಿಯಾಗಿ ಡಾ.ಎಂ ಲೋಕೇಶ್ವರಿ, ಸಹಾಯಕ ಪ್ರಾಧ್ಯಾಪಕರು ಮತ್ತು ಎನ್‌ಎಸ್‌ಎಸ್ ಅಧಿಕಾರಿ, ಆರ್‌ವಿ ಇಂಜಿನಿಯರಿಂಗ್, ಬೆಂಗಳೂರು, ಇವರು ಅಪಾಯಕಾರಿ ತ್ಯಾಜ್ಯ ನಿರ್ವಹಣೆಯ ನಿಯಮಗಳು ಮತ್ತು ನಿಬಂಧನೆಗಳು ಹಾಗೂ ಮಾನವನ ಆರೋಗ್ಯ ಮತ್ತು ಪರಿಸರದ ಮೇಲೆ ಅದರ ಪ್ರಭಾವದ ಬಗ್ಗೆ ವಿವರಿಸಿದರು. |

| | | | | | | |
|---|---|---|---|---|---|---|
| | | | | ಸಾರ್ವಜನಿಕರು | | |
| 19 | ಹವಾಮಾನದ ಬದಲಾವಣೆಯ ವಿಜ್ಞಾನ–ಹೊಂದಾಣಿಕೆ ಮತ್ತು ತಗ್ಗಿಸುವಿಕೆಯ ಕುರಿತು ವೆಬಿನಾರ್ | 12–07–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಓಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 90 | ಸಂಪನ್ಮೂಲ ವ್ಯಕ್ತಿಯಾಗಿ ಡಾ. ಇಂದು ಕೆ. ಮೂರ್ತಿ ಪ್ರಧಾನ ಸಂಶೋಧನಾ ವಿಜ್ಞಾನಿ, CSTEP ಇವರು ಹವಾಮಾನ ಬದಲಾವಣೆಯನ್ನು ಪರಿಹರಿಸಲು ಹಲವು ರೂಪಾಂತರ ಮತ್ತು ತಗ್ಗಿಸುವಿಕೆಯ ಆಯ್ಕೆಗಳ ಬಗ್ಗೆ ವಿವರಿಸಿದರು. |
| 20 | ಕೋವಿಡ್–19ನ ತ್ಯಾಜ್ಯ ನಿರ್ವಹಣೆ ಕುರಿತು ವೆಬಿನಾರ್ | 13–07–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಓಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 22 | ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ರಾಧೇಶ್ಯಾಮ್ ಬಾಲಾಜಿ, ಹೆಚ್ಚುವರಿ ನಿರ್ದೇಶಕ (ನಿವೃತ್ತ), ಸಿಪಿಸಿಬಿ ಇವರು ಸಿಪಿಸಿಬಿ ಮಾರ್ಗಸೂಚಿಗಳ ಪ್ರಕಾರ ಕೋವಿಡ್ –19ನ ತ್ಯಾಜ್ಯ ನಿರ್ವಹಣೆ ಕುರಿತು ವಿವರಿಸಿದರು. |
| 21 | ವಿಪತ್ತು ಮತ್ತು ನಿರ್ವಹಣಾ ತಂತ್ರಗಳ ಕುರಿತು ವೆಬಿನಾರ್ | 14–07–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಓಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 43 | ಸಂಪನ್ಮೂಲ ವ್ಯಕ್ತಿಯಾದ ಶ್ರೀ ವಿ.ಎನ್. ನಾಯಕ್, ಸಾಗರ ಜೀವಶಾಸ್ತ್ರದ ಪ್ರಾಧ್ಯಾಪಕರು (ನಿವೃತ್ತ) ಇವರು ವಿಪತ್ತು ಮತ್ತು ಪರಿಣಾಮಕಾರಿ ನಿರ್ವಹಣಾ ತಂತ್ರಗಳ ಬಗ್ಗೆ ವಿವರಿಸಿದರು. |
| 22 | ಹವಾಮಾನ ಬದಲಾವಣೆ, ಸಾರ್ವಜನಿಕ ಆರೋಗ್ಯ ಮತ್ತು ಕೋವಿಡ್–19 ನಡುವಿನ ಸಂಬಂಧ: ಅನಾನುಕೂಲವಾದ ಸತ್ಯ ಕುರಿತು ವೆಬಿನಾರ್ | 15–07–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಓಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 39 | ಸಂಪನ್ಮೂಲ ವ್ಯಕ್ತಿಯಾದ ಪ್ರೊ. ಕೃಷ್ಣ ರಾಜ್, ಐಎಸ್‌ಇಸಿ ಇವರು ಹವಾಮಾನ ಬದಲಾವಣೆ, ಸಾರ್ವಜನಿಕ ಆರೋಗ್ಯ ಮತ್ತು ಕೋವಿಡ್–19 ಸಾಂಕ್ರಾಮಿಕದ ನಡುವಿನ ಸಂಬಂಧದ ಬಗ್ಗೆ ವಿವರಿಸಿದರು. |
| 23 | ಪಶ್ಚಿಮ ಘಟ್ಟಗಳು – ಇಂದು ಮತ್ತು ನಾಳೆ ಕುರಿತು ವೆಬಿನಾರ್ | 16–07–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, | 27 | ಸಂಪನ್ಮೂಲ ವ್ಯಕ್ತಿಯಾಗಿ ಬೆಂಗಳೂರಿನ ಐಐಜೆಎನ್‌ಎಂ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಜರ್ನಲಿಸಂ ಮತ್ತು ನ್ಯೂ ಮೀಡಿಯಾ)ದ ಖ್ಯಾತ ಪರಿಸರವಾದಿ ಮತ್ತು ಸಂದರ್ಶಕ ಪ್ರಾಧ್ಯಾಪಕರಾದ ಶ್ರೀ ಪ್ರೊ.ನಾಗೇಶ್ ಹೆಗ್ಡೆರವರು ಪಶ್ಚಿಮ ಘಟ್ಟಗಳ ಪ್ರಾಮುಖ್ಯತೆ ಬಗ್ಗೆ ವಿವರಿಸಿದರು. |

| | | | | | | |
|---|---|---|---|---|---|---|
| | | | | ಎನ್‌ಜಿಒಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | | |
| 24 | ಕ್ಲೀನರ್, ಗ್ರೀನರ್ ಮತ್ತು ಕೈಂಡರ್ ಅರ್ಥ್ ಅನ್ನು ರಚಿಸುವಲ್ಲಿ ನಮ್ಮ ಪಾತ್ರದ ಕುರಿತು ವೆಬಿನಾರ್ | 22–07–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಒಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 27 | ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ದೀಪಾಂಬಿಕಾ ಟಿ ಜೆ, ಗೋ–ಗ್ರೀನ್ ಉತ್ಸಾಹಿ ಮತ್ತು ಶಿಕ್ಷಣತಜ್ಞರು, ಸಿಂಗಾಪುರ ಇವರು ಸ್ವಚ್ಛ, ಹಸಿರು ಮತ್ತು ಕೈಂಡರ್ ಅರ್ಥ್ ಅನ್ನು ರಚಿಸುವಲ್ಲಿ ನಮ್ಮ ಪಾತ್ರದ ಬಗ್ಗೆ ವಿವರಿಸಿದರು. |
| 25 | ಸುಸ್ಥಿರ ಅಭಿವೃದ್ಧಿಯಲ್ಲಿ ಕೈಗಾರಿಕೆಗಳ ಪಾತ್ರದ ಕುರಿತು ವೆಬಿನಾರ್ | 23–07–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಒಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 87 | ಸಂಪನ್ಮೂಲ ವ್ಯಕ್ತಿಯಾಗಿ ಪ್ರೊ. ನಾಗೇಶ್ ಹೆಗಡೆ, ಹೆಸರಾಂತ ಪರಿಸರವಾದಿ ಮತ್ತು ಸಂದರ್ಶಕ ಪ್ರಾಧ್ಯಾಪಕರು IIJNM (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಜರ್ನಲಿಸಂ ಮತ್ತು ನ್ಯೂ ಮೀಡಿಯಾ), ಬೆಂಗಳೂರು ಇವರು ಸುಸ್ಥಿರ ಅಭಿವೃದ್ಧಿ ಮತ್ತು ಪರಿಸರವನ್ನು ರಕ್ಷಿಸುವಲ್ಲಿ ಕೈಗಾರಿಕೆಗಳ ಪಾತ್ರದ ಕುರಿತು ವಿವರಿಸಿದರು. |
| 26 | ಕೋವಿಡ್ ಸಮಯದಲ್ಲಿ ಮತ್ತು ನಂತರ ಘನತ್ಯಾಜ್ಯ ನಿರ್ವಹಣೆ ಕುರಿತು ವೆಬಿನಾರ್ | 26–07–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಒಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 41 | ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ರಾಧೇಶ್ಯಾಮ್ ಬಾಲಾಜಿ, ಹೆಚ್ಚುವರಿ ನಿರ್ದೇಶಕರು (ನಿವೃತ್ತ), ಸಿಪಿಸಿಬಿ, ಬೆಂಗಳೂರು ಇವರು ಕೋವಿಡ್ ಸಮಯದಲ್ಲಿ ಮತ್ತು ನಂತರ ಘನ ತ್ಯಾಜ್ಯ ನಿರ್ವಹಣೆಯ ಬಗ್ಗೆ ವಿವರಿಸಿದರು. |
| 27 | 75 ಹಸಿರು ಉತ್ತಮ ಕಾರ್ಯಗಳ ಕುರಿತು ವೆಬಿನಾರ್ | 28–07–2021 | ಆನ್‌ಲೈನ್ | ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು | 300+ | ಶಾಲಾ ಹಂತದಲ್ಲಿ ಕೈಗೊಳ್ಳಬೇಕಾದ "ಹಸಿರು ಒಳ್ಳೆಯ ಕಾರ್ಯಗಳು" ಚಟುವಟಿಕೆಗಳ ಬಗ್ಗೆ ಎನ್‌ಜಿಸಿ ಸಿಬ್ಬಂದಿಯು ವಿವರಿಸಿದರು. |
| 28 | ಸಾಂಕ್ರಾಮಿಕ ರೋಗ ತಡೆಗಟ್ಟುವಿಕೆ: ಸರಳ ಹಂತಗಳು ಕುರಿತು ವೆಬಿನಾರ್ | 29–07–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಒಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 15 | ಸಂಪನ್ಮೂಲ ವ್ಯಕ್ತಿಯಾಗಿ ಡಾ.ಎಸ್.ಪೃಥ್ವೀಶ್, ಸಾರ್ವಜನಿಕ ಆರೋಗ್ಯ ತಜ್ಞ, ಸೊಸೈಟಿ ಫಾರ್ ಕಮ್ಯುನಿಟಿ ಹೆಲ್ತ್ ಆಕ್ಷನ್ ಮತ್ತು ರಿಸರ್ಚ್ ಬೆಂಗಳೂರು ಇವರು ಸಾಂಕ್ರಾಮಿಕ ರೋಗ ತಡೆಗಟ್ಟುವ ಕ್ರಮಗಳ ಬಗ್ಗೆ ವಿವರಿಸಿದರು. |

| | | | | | | |
|---|---|---|---|---|---|---|
| 29 | ಇ–ತ್ಯಾಜ್ಯ–ಪ್ರತಿಕೂಲ ಪರಿಣಾಮವನ್ನು ಕಡಿಮೆ ಮಾಡಲು ವಿವಿಧ ಪಾಲುದಾರರ ಜವಾಬ್ದಾರಿಗಳ ಕುರಿತು ವೆಬಿನಾರ್ | 30–07–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಒಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 124 | ಸಂಪನ್ಮೂಲ ವ್ಯಕ್ತಿಯಾಗಿ ಡಾ. ಎಂ ಲೋಕೇಶ್ವರಿ, ಸಹಾಯಕ ಪ್ರಾಧ್ಯಾಪಕರು ಮತ್ತು ಎನ್‌ಎಸ್‌ಎಸ್ ಅಧಿಕಾರಿ, ಆರ್‌ವಿ ಇಂಜಿನಿಯರಿಂಗ್, ಬೆಂಗಳೂರು, ಇವರು ಇ–ತ್ಯಾಜ್ಯ – ವ್ಯತಿರಿಕ್ತ ಪರಿಣಾಮವನ್ನು ಕಡಿಮೆ ಮಾಡಲು ವಿವಿಧ ಪಾಲುದಾರರ ಜವಾಬ್ದಾರಿಗಳ ಕುರಿತು ವಿವರಿಸಿದರು. |
| 30 | ವಿಶ್ವ ಪರಿಸರದ ಮೇಲೆ ಜಾಗತಿಕ ತಾಪಮಾನದ ಪ್ರಭಾವದ ಕುರಿತು ವೆಬಿನಾರ್ | 31–07–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಒಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 97 | ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಡಿ.ಆರ್. ಕುಮಾರಸ್ವಾಮಿ, ಸಿಇಒ (ನಿವೃತ್ತ), ಕೆಎಸ್‌ಪಿಸಿಬಿ, ಬೆಂಗಳೂರು ಇವರು ವಿಶ್ವ ಪರಿಸರದ ಮೇಲೆ ಜಾಗತಿಕ ತಾಪಮಾನದ ಪ್ರಭಾವದ ಬಗ್ಗೆ ವಿವರಿಸಿದರು. |
| 31 | ಹಸಿರು ಒಳ್ಳೆಯ ಕಾರ್ಯಗಳ ವಾರದ ಅಭಿಯಾನ | 05–11–2021 ರಿಂದ 11–11–2021 | ಕ್ಷೇತ್ರ ಭೇಟಿ | ರಾಮನಗರ, ಮಂಡ್ಯ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಇಕೋ–ಕ್ಲಬ್ ಶಾಲೆಗಳಿಗೆ ಭೇಟಿ | 21 ಇಕೋ ಕ್ಲಬ್ ಶಾಲೆಗಳು | "ಹಸಿರು ಒಳ್ಳೆಯ ಕಾರ್ಯ" ವಾರದ ಅಭಿಯಾನದಲ್ಲಿ 21 ಇಕೋ ಕ್ಲಬ್ ಶಾಲೆಗಳಿಗೆ ಎನ್‌ಜಿಸಿ ಪ್ರೋಗ್ರಾಮ್ ಆಸೋಸಿಯೇಟ್‌ರಾದ ಶ್ರೀ ಮಲ್ಲೇಶ್ ರವರು ಭೇಟಿ ನೀಡಿದರು. ಶಾಲೆಗಳಲ್ಲಿ ಹಸಿರು ಒಳ್ಳೆಯ ಕಾರ್ಯಗಳಿಗೆ ಸಂಬಂಧಿಸಿದ ಚಿತ್ರಕಲೆ, ರಸಪ್ರಶ್ನೆ ಮತ್ತು ಇತರ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು. |
| 32 | ಭಾರತದ ನದಿಗಳ ಆಚರಣೆ–ಪ್ರಕೃತಿ ನಡಿಗೆ | 21–12–2021 | ದೊರೆಸಾನಿಪಾಳ್ಯ ಅರಣ್ಯ ಪ್ರದೇಶ ಜೆ.ಪಿ.ನಗರ | ಇಕೋ–ಕ್ಲಬ್ ವಿದ್ಯಾರ್ಥಿಗಳು | 60+ | ಬೆಂಗಳೂರಿನ ದೊರೆಸಾನಿಪಾಳ್ಯ ಮೀಸಲು ಅರಣ್ಯ ಪ್ರದೇಶದಲ್ಲಿ "ಪ್ರಕೃತಿ ನಡಿಗೆ" ಕಾರ್ಯಕ್ರಮ ಆಯೋಜಿಸಲಾಗಿತ್ತು. ಕರ್ನಾಟಕ ಪಬ್ಲಿಕ್ ಸ್ಕೂಲ್ (ಕೆಪಿಎಸ್), ಅಗರ ಬೆಂಗಳೂರಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶ್ರೀ ಬಾಲಸುಬ್ರಹ್ಮಣ್ಯ ಶರ್ಮ, ಸಂಶೋಧನಾ ಸಹಾಯಕರು ಮತ್ತು ಸಸ್ಯಶಾಸ್ತ್ರ ತಜ್ಞರು ಮತ್ತು ಶ್ರೀ ಚತುರ್ವೇದ್ ಶೇಟ್, ಸಂಶೋಧನಾ ಸಹಾಯಕರು, ಚಿಟ್ಟೆಗಳು ಮತ್ತು ಜೇಡಗಳ ತಜ್ಞರು ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದವರು. ದೊರೆಸಾನಿಪಾಳ್ಯ ಮೀಸಲು ಅರಣ್ಯ ಪ್ರದೇಶದ ವಿವಿಧ ಜಾತಿಯ ಸಸ್ಯಗಳು, ಮರಗಳು, ಚಿಟ್ಟೆಗಳು, ಜೇಡಗಳು, ಪಕ್ಷಿಗಳು, ಕೀಟಗಳು ಇದೆಲ್ಲಾರ ಗುರುತಿಸುವಿಕೆ ಮತ್ತು ವೈಶಿಷ್ಟ್ಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ವಿವರಿಸಲಾಯಿತು. "ಭಾರತದ ನದಿಗಳು" ವಿಷಯದ ಕುರಿತು ವಿದ್ಯಾರ್ಥಿಗಳಿಗೆ ಭಾಷಣ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು, ಇದಲ್ಲದೆ, "ಬೆಂಗಳೂರಿನ ಪತಂಗಗಳು ಮತ್ತು ಜೇಡಗಳು" ಎಂಬ ಪುಸ್ತಕವನ್ನು ಶ್ರೀಮತಿ ರಿತು ಕಕ್ಕರ್, ಭಾ.ಅ.ಸೇ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಮಹಾನಿರ್ದೇಶಕರು (ಪ್ರಭಾರ), ಎಂಪ್ರಿ ಮತ್ತು ಡಾ. ಕೆ. ಎಚ್ ವಿನಯ್ ಕುಮಾರ್, |

| | | | | | | |
|---|---|---|---|---|---|---|
| | | | | | | ಭಾ.ಅ.ಸೇ (ನಿವೃತ್ತ), ಸಂಶೋಧನಾ ನಿರ್ದೇಶಕರು, ಎಂಪ್ರಿ ಇವರು ವಿದ್ಯಾರ್ಥಿಗಳಿಗೆ ವಿತರಿಸಿದರು. |
| **ಭಾರತ್ ಕಾ ಅಮೃತ್ ಮಹೋತ್ಸವ ಚಟುವಟಿಕೆಗಳು (ಜೌಗುಭೂಮಿ ವಿಭಾಗ- ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ)** | | | | | | |
| **ಕ್ರ.ಸಂ** | **ಅಭಿಯಾನ/ಕಾರ್ಯಕ್ರಮದ ಹೆಸರು** | **ಕಾರ್ಯಕ್ರಮದ ದಿನಾಂಕ** | **ಸ್ಥಳ** | **ಭಾಗಗಳು** | **ಭಾಗವಹಿಸಿದ ವರ ಸಂಖ್ಯೆ** | **ಸಾರಾಂಶ** |
| 01 | "ಜಲಮೂಲ ಮರುಸ್ಥಾಪನೆ" ಕುರಿತು ವೆಬಿನಾರ್ | 14–06–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಓಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 46 | ಡಾ.ಶೋಭಾ ಆನಂದ್ ರೆಡ್ಡಿ, ಪರಿಸರ ಸಮಾಲೋಚಕರು, ಇವರು ಜಲಮೂಲಗಳ ಮರುಸ್ಥಾಪನೆ ಕುರಿತು ಪ್ರಸ್ತುತಿ ಮಂಡಿಸಿದರು |
| 02 | "ನೀರಿಗೆ ಅನಾರೋಗ್ಯ ಮಾಡಬೇಡಿ" ಕುರಿತು ವೆಬಿನಾರ್ | 16–06–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಓಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 83 | ಶ್ರೀ ಡಿ.ಆರ್.ಕುಮಾರಸ್ವಾಮಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಿಇಒ (ನಿವೃತ್ತ) ಇವರು ಜಲ ಮಾಲಿನ್ಯ ಮತ್ತು ಜಲಮೂಲಗಳ ಪ್ರಾಮುಖ್ಯತೆ ಕುರಿತು ವಿವರಿಸಿದರು |
| 03 | ಜೌಗು ಪ್ರದೇಶಗಳ ಪ್ರಾಮುಖ್ಯತೆ ಮತ್ತು ಸಂರಕ್ಷಣೆ– ಕುರಿತು ವೆಬಿನಾರ್ | 30–06–2021 | ಆನ್‌ಲೈನ್ | ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾರ್ಪೊರೇಟ್‌ಗಳು, ಎನ್‌ಜಿಓಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕರು | 131 | ಡಾ. ಶೋಭಾ ಆನಂದ ರೆಡ್ಡಿ, ಪರಿಸರ ಸಮಾಲೋಚಕರು ಇವರು ಜಲಮೂಲಗಳ ಮಹತ್ವ ಮತ್ತು ಸಂರಕ್ಷಣೆ ಕುರಿತು ವಿವರಿಸಿದರು. |
| 04 | ಶಾಲಾ ವಿದ್ಯಾರ್ಥಿಗಳಿಗೆ ಸ್ಪರ್ಧೆಗಳು | 01–08–2021 ಯಿಂದ 31–08–2021 | ಆನ್‌ಲೈನ್ | ಇಕೋ–ಕ್ಲಬ್ ಶಾಲೆಯ ವಿದ್ಯಾರ್ಥಿಗಳು | 196 | "ಜೌಗುಭೂಮಿ ಸಂರಕ್ಷಣೆ" ವಿಷಯದ ಕುರಿತು ಶಾಲಾ ಮಕ್ಕಳಿಗೆ ಘೋಷಣೆ ವಾಕ್ಯ ಮತ್ತು ಚಿತ್ರಕಲೆ ಸ್ಪರ್ಧೆಗಳನ್ನು ನಡೆಸಲಾಯಿತು. |

| | | | | | | |
|---|---|---|---|---|---|---|
| 05 | ಜೌಗುಭೂಮಿ ಸಂರಕ್ಷಣೆ ಕುರಿತು ವೆಬಿನಾರ್ | 19–08–2021<br><br>23–08–2021 | ಆನ್‌ಲೈನ್ | ದಾವಣಗೆರೆ, ಚಿಕ್ಕೋಡಿ ಮತ್ತು ಶಿರಸಿ ಜಿಲ್ಲೆಯ ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು, ಶಿಕ್ಷಣ ಇಲಾಖೆ ಅಧಿಕಾರಿಗಳು<br>ಮತ್ತು<br>ಕೊಡಗು, ಉತ್ತರ ಕನ್ನಡ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು, ಶಿಕ್ಷಣ ಇಲಾಖೆ ಅಧಿಕಾರಿಗಳು | 210<br><br>95 | ಡಬ್ಲ್ಯುಡಬ್ಲ್ಯೂಎಫ್ ಇಂಡಿಯಾ ಲಿಮಿಟೆಡ್ ಸಹಯೋಗದಲ್ಲಿ ವೆಬಿನಾರ್‌ಗಳನ್ನು ಆಯೋಜಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಗಳಾಗಿ ಶಶಿಕಲಾ ಅಯ್ಯರ್ ಮತ್ತು ಲೋಹಿತ್ ವೈ.ಟಿ, ಡಬ್ಲ್ಯುಡಬ್ಲ್ಯೂಎಫ್–ಇಂಡಿಯಾ ಇವರು ಈ ಕೆಳಗಿನ ವಿಷಯಗಳ ಕುರಿತು ವೆಬಿನಾರ್‌ಗಳನ್ನು ನಡೆಸಿ ಕೊಟ್ಟರು<br>• ನೀರಿನ ಹೆಜ್ಜೆಗುರುತು (ವೈಯಕ್ತಿಕ ಮತ್ತು ಸಮುದಾಯ/ ಶಾಲಾ ಮಟ್ಟ) ಮೌಲ್ಯಮಾಪನ ಮತ್ತು ಕಡಿಮೆ ಮಾಡುವಿಕೆ<br>• ನಗರ ಜೌಗು ಪ್ರದೇಶಗಳನ್ನು ಸಂರಕ್ಷಿಸುವುದು.<br>• ಬಹು ಪಾಲುದಾದರು ಭಾಗವಹಿಸುವಿಕೆಯೊಂದಿಗೆ ಜೌಗುಭೂಮಿಯ ಪುನರುಜ್ಜೀವನದ ಉದಾಹರಣಾ ಪರಿಶೀಲನೆ |
| 07 | ಜೌಗುಭೂಮಿ ಆರೋಗ್ಯ ಮೌಲ್ಯಮಾಪನ ಕುರಿತು ವೆಬಿನಾರ್ | 25–08–2021<br><br>26–08–2021 | ಆನ್‌ಲೈನ್ | ಮಂಡ್ಯ, ಕಲುಬುರಗಿ ಮತ್ತು ಮಧುಗಿರಿ ಜಿಲ್ಲೆಯ ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು, ಶಿಕ್ಷಣ ಇಲಾಖೆ ಅಧಿಕಾರಿಗಳು<br>ಮತ್ತು<br>ಚಿಕ್ಕಮಗಳೂರು, ಹಾವೇರಿ ಮತ್ತು ಶಿವಮೊಗ್ಗ ಜಿಲ್ಲೆಯ ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು, ಶಿಕ್ಷಣ ಇಲಾಖೆ ಅಧಿಕಾರಿಗಳು | 435<br><br>430 | ಸಂಪನ್ಮೂಲ ವ್ಯಕ್ತಿಗಳಾದ ಶಶಿಕಲಾ ಅಯ್ಯರ್ ಮತ್ತು ಲೋಹಿತ್ ವೈ.ಟಿ, ಡಬ್ಲ್ಯುಡಬ್ಲ್ಯೂಎಫ್–ಇಂಡಿಯಾ ಇವರು ಈ ಕೆಳಗಿನ ವಿಷಯಗಳ ಕುರಿತು ವೆಬಿನಾರ್‌ಗಳನ್ನು ನಡೆಸಿ ಕೊಟ್ಟರು.<br>• ಜೌಗುಭೂಮಿ ಆರೋಗ್ಯ ಮೌಲ್ಯಮಾಪನ–ಪ್ರಕ್ರಿಯೆ.<br>• ಪಕ್ಷಿ ವೀಕ್ಷಣೆ ಮತ್ತು ಪಕ್ಷಿ ಗುರುತಿಸುವಿಕೆ.<br>• ಜೌಗುಭೂಮಿ ಸಂರಕ್ಷಣೆಗಾಗಿ ಜೌಗುಭೂಮಿ ಮಿತ್ರರ ಪಾತ್ರ. |
| **ಆಜಾದಿ ಕಾ ಅಮೃತ್ ಮಹೋತ್ಸವ – ಐಕಾನಿಕ್ ವಾರದ ಆಚರಣೆ (4 ರಿಂದ 10ನೇ ಅಕ್ಟೋಬರ್, 2021)** | | | | | | |
| **ಕ್ರ.ಸಂ** | **ಅಭಿಯಾನ/ಕಾರ್ಯಕ್ರಮದ ಹೆಸರು** | **ಕಾರ್ಯಕ್ರಮದ ದಿನಾಂಕ** | **ಸ್ಥಳ** | **ಭಾಗಾಳು** | **ಭಾಗವಹಿಸಿದ ವರ ಸಂಖ್ಯೆ** | **ಸಾರಾಂಶ** |
| 01 | "ಪ್ಲಾಸ್ಟಿಕ್ ಬಳಕೆಯ ಬಗ್ಗೆ ಜಾಗೃತಿ" ಕುರಿತು ವೆಬಿನಾರ್ | 04–10–2021 | ಆನ್‌ಲೈನ್ | ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು | 75+ | ಶ್ರೀ ವಿಜಯಕುಮಾರ್, ಅಧ್ಯಕ್ಷರು, ಕರ್ನಾಟಕ ರಾಜ್ಯ ಪಾಲಿಮರ್ಸ್ ಅಸೋಸಿಯೇಷನ್, ಇವರು ಕರ್ನಾಟಕ ಪ್ಲಾಸ್ಟಿಕ್ ಬಳಕೆ ಮತ್ತು ಏಕ ಬಳಕೆಯ ಪ್ಲಾಸ್ಟಿಕ್ ಅನ್ನು ತಡೆಗಟ್ಟುವ ಬಗ್ಗೆ ವಿವರಿಸಿದರು. |

| | | | | | | |
|---|---|---|---|---|---|---|
| 02 | ಕೆರೆ/ಜೌಗುಭೂಮಿ/ಜಲ ಸಂರಕ್ಷಣೆ ಕುರಿತು ವೆಬಿನಾರ್ | 05–10–2021 | ಆನ್‌ಲೈನ್ | ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು | 200+ | ಶ್ರೀ ಲೋಹಿತ್, ಸಹಾಯಕ ಮ್ಯಾನೇಜರ್, ಡಬ್ಲ್ಯುಡಬ್ಲ್ಯೂಎಫ್–ಇಂಡಿಯಾ. ಇವರು ಜೌಗುಭೂಮಿ ಮತ್ತು ನೀರಿನ ಸಂರಕ್ಷಣೆಯ ಬಗ್ಗೆ ವಿವರಿಸಿದರು |
| 03 | ಹಸಿರುಮನೆ ಅನಿಲ ಮತ್ತು ಹವಾಮಾನ ಬದಲಾವಣೆಯ ಕುರಿತು ವೆಬಿನಾರ್ | 07–10–2021 | ಆನ್‌ಲೈನ್ | ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು | 30+ | ಶ್ರೀ ಮಹೇಶ್ ಕಶ್ಯಪ್, ಸಮಾಲೋಚಕರು, ಇವರು ಹವಾಮಾನ ಬದಲಾವಣೆ ಮತ್ತು ಹಸಿರುಮನೆ ಅನಿಲಗಳ ಪ್ರಭಾವದ ಬಗ್ಗೆ ವಿವರಿಸಿದರು. |
| 04 | ವನ್ಯಜೀವಿ ಸಂರಕ್ಷಣೆಯ ಕುರಿತು ವೆಬಿನಾರ್ | 08–10–2021 | ಆನ್‌ಲೈನ್ | ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು | 615+ | ಶ್ರೀ ಬಾಲಚಂದ್ರ ಟಿ, ಭಾ.ಅ.ಸೇ, (ನಿವೃತ್ತ), ಸಂಯೋಜಕರು, ಜೆಎಸ್ ಡಬ್ಲ್ಯೂ ಪ್ರಾಜೆಕ್ಟ್, ಎಂಪ್ರಿ ಇವರು ವನ್ಯಜೀವಿ ಸಂರಕ್ಷಣೆ ಮತ್ತು ವನ್ಯಜೀವಿ ಸಂರಕ್ಷಣೆಗಾಗಿ ಭಾರತ ಸರ್ಕಾರದ ವಿವಿಧ ಪ್ರಯತ್ನಗಳ ಕುರಿತು ವಿವರಿಸಿದರು. |
| 05 | ಅರಣ್ಯ ಸಂರಕ್ಷಣೆ/ಅರಣ್ಯೀಕರಣ ಕುರಿತು ವೆಬಿನಾರ್ | 09–10–2021 | ಆನ್‌ಲೈನ್ | ಇಕೋ–ಕ್ಲಬ್ ಉಸ್ತುವಾರಿ ಶಿಕ್ಷಕರು | 125+ | ಡಾ.ಕೆ.ಎಚ್.ವಿನಯ್ ಕುಮಾರ್, ಭಾ.ಅ.ಸೇ (ನಿವೃತ್ತ) ಮತ್ತು ನಿರ್ದೇಶಕ (ಸಂಶೋಧನೆ), ಇವರು ಅರಣ್ಯಗಳ ಸಂರಕ್ಷಣೆ ಮತ್ತು ಅರಣ್ಯೀಕರಣದ ಮಹತ್ವದ ಕುರಿತು ಉಪನ್ಯಾಸ ನೀಡಿದರು. |
| 06 | ಪೋಸ್ಟರ್ ತಯಾರಿಕೆ ಸ್ಪರ್ಧೆಗಳು | 04–10–2021 ರಿಂದ 08–10–2021 (ವನ್ಯಜೀವಿ ವಾರ) | ಆನ್‌ಲೈನ್ | ಇಕೋ–ಕ್ಲಬ್ ವಿದ್ಯಾರ್ಥಿಗಳು | 249 | "ವನ್ಯಜೀವಿ ಸಂರಕ್ಷಣೆ" ವಿಷಯದ ಮೇಲೆ ಪೋಸ್ಟರ್ ತಯಾರಿಕೆ ಸ್ಪರ್ಧೆಗಳನ್ನು ನಡೆಸಲಾಯಿತು. |
| 07 | ಕರಕುಶಲ ಸ್ಪರ್ಧೆಗಳು | 04–10–2021 ರಿಂದ 08–10–2021 | ಆನ್‌ಲೈನ್ | ಇಕೋ–ಕ್ಲಬ್ ವಿದ್ಯಾರ್ಥಿಗಳು | 160 | "ಪ್ಲಾಸ್ಟಿಕ್ ಮರುಬಳಕೆ" ವಿಷಯದ ಮೇಲೆ ಕರಕುಶಲ ಸ್ಪರ್ಧೆಗಳನ್ನು ನಡೆಸಲಾಯಿತು |
| 08 | ಘೋಷಣೆ ವಾಕ್ಯ ಬರೆಯುವ ಸ್ಪರ್ಧೆ | 04–10–2021 ರಿಂದ 08–10–2021 | ಆನ್‌ಲೈನ್ | ಇಕೋ–ಕ್ಲಬ್ ವಿದ್ಯಾರ್ಥಿಗಳು | 159 | "ಅರಣ್ಯೀಕರಣ" ವಿಷಯದ ಮೇಲೆ ಘೋಷಣೆ ವಾಕ್ಯ ಬರೆಯುವ ಸ್ಪರ್ಧೆಗಳನ್ನು ನಡೆಸಲಾಯಿತು. |
| 09 | ಇಕೋಕ್ಲಬ್ ಶಾಲೆಗಳಿಗೆ ಬಟ್ಟೆ ಚೀಲಗಳು ಮತ್ತು ಪರಿಸರ ಸ್ನೇಹಿ ಕಸದ ಬುಟ್ಟಿಗಳ ವಿತರಣೆ | 04–10–2021 ರಿಂದ 08–10–2021 | ಇಕೋ–ಕ್ಲಬ್ ಶಾಲೆಗಳು | ಬೆಂಗಳೂರು ಉತ್ತರ ಜಿಲ್ಲೆಯ ಇಕೋ–ಕ್ಲಬ್ ಶಾಲೆಗಳಿಗೆ ಭೇಟಿ | 6 ಇಕೋ ಕ್ಲಬ್ ಶಾಲೆಗಳು | ಏಕ ಬಳಕೆಯ ಪ್ಲಾಸ್ಟಿಕ್ ಅನ್ನು ತಡೆಗಟ್ಟುವ ಕುರಿತು ಜಾಗೃತಿ ಮೂಡಿಸಲು ಎನ್‌ಜಿಸಿ ಸಿಬ್ಬಂದಿಗಳು ಇಕೋ ಕ್ಲಬ್ ಶಾಲೆಗಳಿಗೆ ಭೇಟಿ ನೀಡಿ ಬಟ್ಟೆ ಚೀಲಗಳು ಮತ್ತು ಪರಿಸರ ಸ್ನೇಹಿ ಕಸದ ಬುಟ್ಟಿಗಳನ್ನು ವಿತರಿಸಿದರು. |
| **ಪೆಟ್ರೋಲಿಯಂ ಸಂರಕ್ಷಣೆ ಸಂಶೋಧನಾ ಸಂಸ್ಥೆ (ಪಿಸಿಆರ್ಎ)ವತಿಯಿಂದ ಶೈಕ್ಷಣಿಕ ಕಾರ್ಯಕ್ರಮಗಳು** | | | | | | |
| **ಕ್ರ.ಸಂ** | **ಅಭಿಯಾನ/ಕಾರ್ಯಕ್ರಮದ ಹೆಸರು** | **ಕಾರ್ಯಕ್ರಮದ ದಿನಾಂಕ** | **ಸ್ಥಳ** | **ಭಾಗಾಳು** | **ಭಾಗವಹಿಸಿದ ವರ ಸಂಖ್ಯೆ** | **ಸಾರಾಂಶ** |
| 01 | ಶಕ್ತಿ ಸಂರಕ್ಷಣೆ ಮತ್ತು ಪರಿಸರ ರಕ್ಷಣೆ ಶಿಕ್ಷಣ ಕಾರ್ಯಕ್ರಮ | 01–04–2021 ರಿಂದ 31–03–2022 | ಇಕೋ–ಕ್ಲಬ್ ಶಾಲೆಗಳು | ಇಕೋ–ಕ್ಲಬ್ ವಿದ್ಯಾರ್ಥಿಗಳು | 135 ಇಕೋಕ್ಲಬ್ ಶಾಲೆಗಳು | ಪ್ರತಿ ಶಾಲೆಗಳಲ್ಲಿ ಗೊತ್ತುಪಡಿಸಿದ ನೋಡಲ್ ಶಾಲಾ ಶಿಕ್ಷಕರ ಮೂಲಕ 12 ಶಿಕ್ಷಣ ಕಾರ್ಯಕ್ರಮಗಳನ್ನು ವಾರ್ಷಿಕವಾಗಿ ನಡೆಸಲಾಗುತ್ತದೆ. ರಾಜ್ಯದಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಮತ್ತು |

| | | | | | | |
|---|---|---|---|---|---|---|
| | | | | | | ಮೇಲ್ವಿಚಾರಣೆ ಮಾಡಲು 2021–22 ರಿಂದ ಎಂಪ್ರಿಯು ರಾಜ್ಯ ನೋಡಲ್ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಶಾಲೆಗಳಲ್ಲಿ "ಎನರ್ಜಿ ಕನ್ಸರ್ವೇಶನ್ ಕ್ಲಬ್" ಅನ್ನು ರಚಿಸಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು |
| 02 | ಪಿಸಿಆರ್‌ಎ ಕಾರ್ಯಕ್ರಮದ ತರಬೇತಿ | 08–07–2021 | ಆನ್‌ಲೈನ್ | ಇಕೋಕ್ಲಬ್ ಉಸ್ತುವಾರಿ ಶಿಕ್ಷಕರು | 200 | ಪಿಸಿಆರ್‌ಎ ಸಹಭಾಗಿತ್ವದಲ್ಲಿ ತರಬೇತಿಯನ್ನು ನಡೆಸಲಾಯಿತು. ನೋಡಲ್ ಶಾಲಾ ಶಿಕ್ಷಕರಿಗೆ ಕಾರ್ಯಕ್ರಮಗಳ ಮಾರ್ಗಸೂಚಿಗಳ ಬಗ್ಗೆ ಚರ್ಚಿಸಲಾಯಿತು. ಶಕ್ತಿ ಸಂರಕ್ಷಣೆಯ ಕುರಿತ ಮಾಹಿತಿಗಳನ್ನು ಮತ್ತು ವೀಡಿಯೊಗಳನ್ನು ಶಿಕ್ಷಕರಿಗೆ ನೀಡಲಾಯಿತು. |

## ಸಭೆಗಳು 2021–22

| ಕ್ರ.ಸಂ | ದಿನಾಂಕ | ಚಟುವಟಿಕೆಗಳ ವಿವರಗಳು | ಭಾಗವಹಿಸುವವರು | ಸ್ಥಳ | ಸಾರಾಂಶ |
|---|---|---|---|---|---|
| 01 | 25–10–2021 | ರಾಜ್ಯ ಸಂಚಾಲನ ಸಮಿತಿ (ಎಸ್‌ಎಸ್‌ಸಿ) ಸಭೆ | ಎಸ್‌ಎಸ್‌ಸಿ ಸದಸ್ಯರು | ಎಂಎಸ್ ಬಿಲ್ಡಿಂಗ್, ಬೆಂಗಳೂರು | ಹಿಂದಿನ ಎಸ್‌ಎಸ್‌ಸಿ ಸಭೆಯ ನಡಾವಳಿಗಳು ಮತ್ತು ತೆಗೆದುಕೊಂಡ ಕ್ರಮಗಳ ವರದಿಯನ್ನು ಗಮನಿಸಲಾಯಿತು ಮತ್ತು ದೃಢೀಕರಿಸಲಾಯಿತು. ಸಮಿತಿಯು 2021–22ನೇ ಸಾಲಿನ ಎನ್‌ಜಿಸಿ ಕಾರ್ಯಕ್ರಮದ ಪ್ರಗತಿ, ಅನುಮೋದಿತ ಕ್ರಿಯಾ ಯೋಜನೆ ಮತ್ತು ಬಜೆಟ್‌ಗಳ ಬಗ್ಗೆ ಪರಿಶೀಲನೆ ಮಾಡಿತು. |
| 02 | ಫೆಬ್ರವರಿ 2022 ರಿಂದ ಏಪ್ರಿಲ್ 2022 | ಜಿಲ್ಲೆಗಳ ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ (ಡಿಐಎಂಸಿ) ಸಭೆಗಳು | ಆಯಾ ಜಿಲ್ಲೆಗಳ ಡಿಐಎಂಸಿ ಸದಸ್ಯರು | ಬೆಳಗಾವಿ, ಚಿಕ್ಕೋಡಿ, ಉಡುಪಿ, ದಾವಣಗೆರೆ, ವಿಜಯಪುರ, ಕೋಲಾರ, ರಾಮನಗರ, ತುಮಕೂರು, ಮಧುಗಿರಿ, ಚಿತ್ರದುರ್ಗ, ಮಂಡ್ಯ, ಚಿಕ್ಕಬಳ್ಳಾಪುರ, ಹಾವೇರಿ, ಕೊಪ್ಪಳ ಮತ್ತು ಚಾಮರಾಜನಗರ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಚೇರಿಗಳು | ಜಿಲ್ಲಾ ಮಟ್ಟದಲ್ಲಿ ಎನ್‌ಜಿಸಿ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದ ಕುರಿತು ಚರ್ಚಿಸಲಾಯಿತು. |

## ಎನ್‌ಜಿಸಿ ತಂಡದಿಂದ ಶಾಲೆಗಳಿಗೆ ಭೇಟಿ

| ದಿನಾಂಕ | ಶಾಲೆಗಳ ಹೆಸರು | ಜಿಲ್ಲೆ | ಶಾಲಾ ಭೇಟಿಯ ಸಂಖ್ಯೆ |
|---|---|---|---|
| 17–08–2021 ರಿಂದ 21–08–2021 | 1. ಸಾರ್ವಜನಿಕ ಪ್ರೌಢಶಾಲೆ, ಬೆಳಕವಾಡಿ<br>2. ಜ್ಞಾನಸೂರ್ಯ ಪ್ರೌಢಶಾಲೆ, ಬೆಳಕವಾಡಿ<br>3. ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಬೆಳಕವಾಡಿ<br>4. ಸರ್ಕಾರಿ ಪ್ರೌಢ ಶಾಲೆ, ಬಿ.ಜಿ.ಪುರ<br>5. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಿ.ಜಿ.ಪುರ<br>6. ಸರ್ಕಾರಿ ಪ್ರೌಢ ಶಾಲೆ, ಸರಗೂರು<br>7. ಟಿಎಸ್‌ಎಸ್ ಸಾರ್ವಜನಿಕ ಪ್ರೌಢಶಾಲೆ, ಬೆಳಕವಾಡಿ | ಮಂಡ್ಯ | 7 ಇಕೋ–ಕ್ಲಬ್ ಶಾಲೆಗಳು |
| | 8. ಸರ್ಕಾರಿ ಪ್ರೌಢ ಶಾಲೆ, ಮುಳ್ಳೂರು<br>9. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊಸಮಾಲಂಗಿ<br>10. ಸರ್ಕಾರಿ ಪ್ರೌಢ ಶಾಲೆ, ಹೊಸಮಾಲಂಗಿ<br>11. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (ಉನ್ನತೀಕರಿಸಿದ), ಟಗರಪುರ | ಚಾಮರಾಜನಗರ | 4 ಇಕೋ–ಕ್ಲಬ್ ಶಾಲೆಗಳು |
| 04–10–2021 ರಿಂದ 08–10–2021 | 12. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಾತನೂರು<br>13. ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಬಾಗಲೂರು<br>14. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಾರೇನಹಳ್ಳಿ<br>15. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮೈಲನಹಳ್ಳಿ<br>16. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮರಳಕುಂಟೆ<br>17. ಕೆಪಿಎಸ್ ಲಿಂಕ್‌ರೋಡ್, ಶೇಷಾದ್ರಿಪುರಂ | ಬೆಂಗಳೂರು ಉತ್ತರ | 6 ಇಕೋ–ಕ್ಲಬ್ ಶಾಲೆಗಳು |
